3.1. ಅನಾವೃಷ್ಟಿಯ ನಿಮಿತ್ತ, 1981ರ ಏಪ್ರಿಲ್ ತಿಂಗಳಿಂದ 1981ರ ಸೆಪ್ಟೆಂಬರ್ ತಿಂಗಳವರೆಗೆ ರಾಜ್ಯದ 15 ಜಿಲ್ಲೆಗಳಲ್ಲಿ ನಡೆಯುತ್ತಿದ್ದ ಕ್ಷಾಮ ಪರಿಹಾರ ಕಾಮಗಾರಿಗಳನ್ನು ಮುಂದುವರಿಸಿಕೊಂಡು ಬರಲಾಯಿತು. ಕ್ಷಾಮ ಪೀಡಿತ ಪ್ರದೇಶಗಳಲ್ಲಿ ದಿನವೊಂದಕ್ಕೆ ಸರಿಸುಮಾರು 2.48 ಲಕ್ಷ ಜನರನ್ನು ಕ್ಷಾಮ ಪರಿಹಾರ ಕಾಮಗಾರಿಗಳಲ್ಲಿಯೂ ಮತ್ತು ದಿನವೊಂದಕ್ಕೆ 3 ಲಕ್ಷ ಜನರನ್ನು ಸಂಕಷ್ಟಕ್ಕೆ ಗುರಿಯಾದ ಪ್ರದೇಶದಲ್ಲಿ ಇಲಾಖಾ ಕಾಮಗಾರಿಗಳಲ್ಲಿಯೂ ನಿಯೋಜಿಸಿಕೊಳ್ಳಲಾಯಿತು. ಈ ಸಂಬಂಧದಲ್ಲಿ 25 ಕೋಟಿ ರೂಪಾಯಿಗಳಿಗೂ ಮೀರಿ ಹಣ ವೆಚ್ಚವಾಗಿದೆ. ಭಾರತ ಸರ್ಕಾರವು ಮುಂಗಡ ಸಹಾಯ ಧನವಾಗಿ 8:06 ಕೋಟಿ ರೂಪಾಯಿ ಮಂಜೂರು ಮಾಡಿದೆ ಮತ್ತು ಈವರೆಗೂ 5 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದೆ. ಭಾರತ ಸರ್ಕಾರದವರು ಈ ಬಗ್ಗೆ ಉದಾರವಾಗಿ ಇನ್ನೂ ಹೆಚ್ಚಿಗೆ ಧನ ಸಹಾಯ ಮಾಡುವ ನಿರೀಕ್ಷೆಯಿದೆ.

3.2 ಪದೇ ಪದೇ ಉಂಟಾಗುತ್ತಿರುವ ಈ ಕ್ಷಾಮ ಪರಿಸ್ಥಿತಿಯ ಸಮಸ್ಯೆಗಳನ್ನು ಕುರಿತು ಅಧ್ಯಯನ ನಡೆಸಲು ಮತ್ತು ಈ ಸಮಸ್ಯಾ ಪರಿಹಾರಕ್ಕೆ ದೀರ್ಘಕಾಲೀನ ಕ್ರಮಗಳನ್ನು ಶಿಫಾರಸು ಮಾಡಲು ಉನ್ನತ ಮಟ್ಟದ ಅಧಿಕಾರಿಗಳ ಒಂದು ಸಮಿತಿಯನ್ನು ರಚಿಸಲಾಗಿದೆ.

4. ರಾಷ್ಟ್ರೀಯ ಪ್ರಯತ್ನದಿಂದ ಮಾತ್ರ ಆರ್ಥಿಕ ಪ್ರಗತಿ ಕಾರ್ಯಸಾಧ್ಯ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ಜತೆಗೂಡಿ ಕಾರ್ಯನಿರ್ವಹಿಸಿದ ಹೊರತು ನಾವು ಸರ್ವತೋಮುಖ

ಪ್ರಗತಿಯನ್ನು ಸಾಧಿಸುವುದು ಸಾಧ್ಯವಿಲ್ಲ. ಈ ವಿಚಾರವನ್ನು ಗಮನದಲ್ಲಿರಿಸಿಕೊಂಡು, ರಾಜ್ಯದ ಉತ್ತರೋತ್ತರ ಪ್ರಗತಿಗಾಗಿ ಪ್ರಧಾನ ಮಂತ್ರಿಯವರ ಇಪ್ಪತ್ತು ಅಂಶಗಳ ಆರ್ಥಿಕ ಕಾರ್ಯಕ್ರಮದ ಪರಿಷ್ಕೃತ ಯೋಜನೆಯನ್ನು ಅಂಗೀಕರಿಸಿದ್ದೇವೆ. ಆರ್ಥಿಕ ಪ್ರಗತಿಯು ಅರ್ಥಪೂರ್ಣವಾಗಬೇಕಾದರೆ ಎಲ್ಲ ವಲಯಗಳಲ್ಲಿ, ವಿಶೇಷತಃ ಕೃಷಿ ಹಾಗೂ ಉದ್ಯಮ ಕ್ಷೇತ್ರಗಳಲ್ಲಿ ಅಧಿಕ ಉತ್ಪಾದನೆಯಾಗಬೇಕು. ಪ್ರಧಾನ ಮಂತ್ರಿಯವರು ಹೇಳಿದಂತೆ 'ಶ್ರಮ ಏವ ಜಯತೆ' ಎಂಬುದು ನಮ್ಮ ಧ್ಯೇಯಮಂತ್ರವಾಗ ಬೇಕು. ಲಾಕ್‌ಔಟ್ ಹಾಗೂ ಮುಷ್ಕರಗಳ ಪರಿಸ್ಥಿತಿಯನ್ನು ನಿವಾರಿಸಲು ನಾವು ಸರ್ವಪ್ರಯತ್ನ ಗಳನ್ನೂ ಕೈಗೊಳ್ಳಬೇಕು. ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗೆ ನಾವು ಆದ್ಯತೆ ನೀಡುತ್ತೇವೆ ಹಾಗೂ ವಿನಾಶಕಾರಿ ಚಟುವಟಿಕೆಗಳಲ್ಲಿ ತೊಡಗಿರುವ ಸಮಾಜ ವಿರೋಧಿ ಶಕ್ತಿಗಳ ಸಂಬಂಧದಲ್ಲಿ ಅತ್ಯಂತ ಕಟ್ಟುನಿಟ್ಟಿನ ಕ್ರಮಕೈಗೊಳ್ಳುತ್ತೇವೆ. ಹರಿಜನ, ಗಿರಿಜನ ಹಾಗೂ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗೆ ಸಂಪೂರ್ಣ ರಕ್ಷಣೆ ನೀಡಲಾಗುವುದು.

5. ಯೋಜನಾ ಆಯೋಗದ ಜತೆ ಚರ್ಚೆ ನಡೆಸಿದ ತರುವಾಯ, 1982–83ನೇ ಸಾಲಿಗಾಗಿ 475 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ವಾರ್ಷಿಕ ಯೋಜನೆಯನ್ನು ಅಂತಿಮಗೊಳಿಸಲಾಗಿದೆ. ಇದಲ್ಲದೆ, ಕಾವೇರಿ ಜಲಾನಯನ ಪ್ರದೇಶದ ನೀರಾವರಿ ಯೋಜನೆಗಳಿಗಾಗಿ 30 ಕೋಟಿ ರೂ. ಅಂದಾಜು ವೆಚ್ಚಕ್ಕೆ ಏರ್ಪಾಡು ಮಾಡಿದೆ. ಹೀಗಾಗಿ 1982–83ರ ಅವಧಿಯ ಅಭಿವೃದ್ಧಿ ಕಾಮಗಾರಿಗಳ ಒಟ್ಟು ಅಂದಾಜು ವೆಚ್ಚ 505 ಕೋಟಿ ರೂ. ಇದಕ್ಕಾಗಿ ಭಾರೀ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಸಂಗ್ರಹಿಸ ಬೇಕಾಗಿದೆ. ಸಂಪನ್ಮೂಲಗಳ ಸಂಗ್ರಹಣೆಯ ಬಗ್ಗೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅವಶ್ಯಕ ನಿಧಿಗಳನ್ನು ಒದಗಿಸುವ ಸಲುವಾಗಿ ಅತ್ಯಗತ್ಯವಲ್ಲದ ವಲಯಗಳಲ್ಲಿ ಮಿತವ್ಯಯ ಸಾಧಿಸುವ ಕ್ರಮ ಕೈಗೊಳ್ಳುವ ಸಂಬಂಧದಲ್ಲಿ ಸಮಾಲೋಚನೆ ನಡೆಸಲು ಸಚಿವ ಸಂಪುಟದ ವಿಶೇಷ ಸಭೆ ನಡೆಯಿತು. ಅಂದಾಜು ವೆಚ್ಚದ ಸುಮಾರು ಶೇಕಡಾ 50 ರಷ್ಟನ್ನು ನೀರಾವರಿ ಹಾಗೂ ವಿದ್ಯುಚ್ಛಕ್ತಿಗಾಗಿ, ಎಂದರೆ ನೀರಾವರಿಗಾಗಿ 110.42 ಕೋಟಿ ರೂ.ಗಳನ್ನು ಹಾಗೂ ವಿದ್ಯುಚ್ಛಕ್ತಿಗಾಗಿ 141.81 ಕೋಟಿ ರೂ. ಗಳನ್ನು ವಿನಿಯೋಗಿಸಲಾಗುವುದು.

6. ಈವರೆಗೆ ನೀರಾವರಿ ಸೌಲಭ್ಯವಿಲ್ಲದ ಪ್ರದೇಶಗಳಿಗೆ 6ನೇ ಯೋಜನೆಯ ಅವಧಿಯಲ್ಲಿ ನೀರಾ ವರಿ ಸೌಕರ್ಯವನ್ನೊದಗಿಸುವ ಯೋಜನೆಯಿದೆ. 1981ರ ಜೂನ್ ಕೊನೆಯವರೆಗೆ 22.94 ಲಕ್ಷ ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸೌಕರ್ಯವನ್ನೊದಗಿಸಲಾಗಿತ್ತು. ಪ್ರಸಕ್ತ ವರ್ಷ ಇನ್ನೂ 81 ಸಾವಿರ ಹೆಕ್ಟೇರುಗಳಷ್ಟು ಪ್ರದೇಶಕ್ಕೆ ನೀರಾವರಿ ಸೌಕರ್ಯವನ್ನೊದಗಿಸಲಾಗುವುದು. ಇದೇ ರೀತಿ, 1982–83ರ ಅವಧಿಯಲ್ಲಿ ಈ ವಿಸ್ತೀರ್ಣವನ್ನು 1 ಲಕ್ಷ ಹೆಕ್ಟೇರು ಪ್ರದೇಶದಷ್ಟಕ್ಕೆ ಹೆಚ್ಚಿಸುವ ಪ್ರಸ್ತಾಪವಿದೆ.

6.1. ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಕಾರ್ಯಗತಗೊಳಿಸುವ ಸಲುವಾಗಿ ಅಂತರ ರಾಷ್ಟ್ರೀಯ ಆರ್ಥಿಕ ಸಂಸ್ಥೆಗಳಿಂದ ಸಾಕಷ್ಟು ಪ್ರಮಾಣದ ಆರ್ಥಿಕ ನೆರವನ್ನು ಪಡೆದುಕೊಳ್ಳಲಾಗಿದೆ. ಪ್ರಮುಖ ನೀರಾವರಿ ಯೋಜನೆಗಳಾದ ಕೃಷ್ಣ ಮೇಲ್ದಂಡೆ, ಘಟಪ್ರಭಾ ಮತ್ತು ಮಲಪ್ರಭಾ ಯೋಜನೆ ಗಳು ಹಾಗೂ ಸಣ್ಣ ನೀರಾವರಿ ಕ್ಷೇತ್ರದಲ್ಲಿರುವ ಹಲವಾರು ಜಲಾಶಯಗಳ ಯೋಜನೆಗಳು ವಿಶ್ವಬ್ಯಾಂಕ್ ನೆರವು ಯೋಜನೆಯ ಸಹಾಯ ಪಡೆಯಲಿವೆ. ವಿಶ್ವಬ್ಯಾಂಕ್ ನೆರವು ಯೋಜನೆಗೆ ಸೇರಿದ ಈ ಎಲ್ಲ ನೀರಾವರಿ ಯೋಜನೆಗಳು ಭರದಿಂದ ಸಾಗುತ್ತಿವೆ.

7. ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಈಗಾಗಲೇ ಪ್ರಗತಿ ಯಲ್ಲಿರುವ ಕಾಳೀನದಿ ಹಂತ I, ರಾಯಚೂರು ಶಾಖ ವಿದ್ಯುತ್ ಕೇಂದ್ರ ಹಾಗೂ ವರಾಹೀ ವಿದ್ಯುದಾ ಗಾರ— ಈ ಯೋಜನೆಗಳನ್ನು ಪೂರೈಸುವ ಕಡೆಗೆ ನಾವು ನಮ್ಮ ಸಂಪೂರ್ಣ ಗಮನವನ್ನು ಕೇಂದ್ರೀಕರಿಸಿ ದ್ದೇವೆ. ಆರನೇ ಯೋಜನೆಯು ಕೊನೆಗೊಳ್ಳುವ ಹೊತ್ತಿಗೆ ಈ ಯೋಜನೆಗಳಿಂದ ರಾಜ್ಯದಲ್ಲಿ ಈಗಿರುವ 1,605 ಮೆಗವಾಟ್ ಸ್ಥಾಪಿತ ವಿದ್ಯುಚ್ಛಕ್ತಿಯ ಮಟ್ಟವು 2,530 ಮೆಗಾವಾಟ್‌ಗಳಿಗೆ ಏರುವ ನಿರೀಕ್ಷೆ ಇದೆ.

7.1 ಜಲ–ವಿದ್ಯುತ್ ಯೋಜನೆಗಳನ್ನು ಕೈಗೊಳ್ಳುವುದರಿಂದಾಗಿ ಜೀವಪರಿಸರ ಸಮತೋಲನ ದಲ್ಲಿ ಯಾವುದೇ ವಿಧದ ಕ್ಷೋಭೆಯುಂಟಾಗದಂತೆ ನೋಡಿಕೊಳ್ಳಲು ಅಗತ್ಯ ಎಚ್ಚರಿಕೆ ವಹಿಸಲಾಗುವುದು.

7.2 ಕರ್ನಾಟಕದಲ್ಲಿ ಅಣು ವಿದ್ಯುತ್ ಕೇಂದ್ರವೊಂದನ್ನು ಸ್ಥಾಪಿಸಬೇಕೆಂಬುದಾಗಿ ಕೋರಿ, ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುತ್ತಿದ್ದೇವೆ. ಈ ಕೇಂದ್ರದ ಸ್ಥಾಪನೆಗೆ ಯಾವ ನಿವೇಶನಗಳು

ಸೂಕ್ತವಾಗಬಹುದೋ ಅಂಥ ನಿವೇಶನಗಳ ಸಂಬಂಧವಾದ ಅಗತ್ಯ ಮಾಹಿತಿಯನ್ನು ಭಾರತ ಸರ್ಕಾರದ ಅಣು ಶಕ್ತಿ ಇಲಾಖೆಯ ನಿವೇಶನ ಆಯ್ಕೆ ಸಮಿತಿಗೆ ಒದಗಿಸಿಕೊಡಲಾಗಿದೆ. ಅನೇಕ ಸಣ್ಣ ಮತ್ತು ಸೂಕ್ಷ್ಮ ಜಲ-ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವ ವಿಚಾರವನ್ನು ನಾವು ಪರಿಶೀಲಿಸುತ್ತಿದ್ದೇವೆ. ಅಂಥ ಸ್ಥಾವರಗಳನ್ನು ಸ್ಥಾಪಿಸುವ ಸಂಬಂಧದಲ್ಲಿ ನಿವೇಶನಗಳನ್ನು ಕಂಡುಹಿಡಿಯಲು ಅಧ್ಯಯನ ಕೈಗೊಳ್ಳಲಾಗಿದೆ.

8. ಸೌರಶಕ್ತಿ ಮತ್ತು ವಿನೂತನ ಶಕ್ತಿ ಮೂಲಗಳನ್ನು ಬಳಸಿಕೊಳ್ಳುವುದು ಕಳೆದ ವರ್ಷ ಸ್ಥಾಪಿತವಾದ ವಿಜ್ಞಾನ ಮತ್ತು ತಾಂತ್ರಿಕ ಇಲಾಖೆಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ.

ಕನಕಪುರದಲ್ಲಿ ರೇಷ್ಮೆ ವ್ಯವಸಾಯಕ್ಕಾಗಿ ಸೌರಶಕ್ತಿಯನ್ನು ಬಳಸಿಕೊಳ್ಳುವ ಯೋಜನೆಯು ಕಾರ್ಯಗತವಾಗಿದೆ ಎಂಬುದನ್ನು ತಿಳಿದ ನಿಮಗೆ ಸಂತೋಷವಾಗಬಹುದು. ಗಾಳಿಯ ವೇಗೋತ್ಕರ್ಷವು ಅನುಕೂಲವಾಗಿರುವ ಯುಕ್ತ ಸ್ಥಳಗಳಲ್ಲಿ ಭಾರತ ಸರ್ಕಾರದ ಸಹಾಯದಿಂದ ಮೂವತ್ತು ಗಾಳಿ ಗಿರಣಿ ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಸೌರಶಕ್ತಿ ಮೂಲ ಮತ್ತು ವಿನೂತನ ಶಕ್ತಿ ಮೂಲಗಳ ಬಳಕೆ ಯನ್ನು ಪ್ರೋತ್ಸಾಹಿಸಲು ಸರ್ಕಾರವು ಸೌರಶಕ್ತಿ ಅಡಿಗೆ ಪಾತ್ರೆ, ನೀರು ಕಾಯಿಸುವ ಪಾತ್ರೆ ಮತ್ತು ವಿದ್ಯುತ್ ಚಾಲಿತ ಯಂತ್ರ-ಇತ್ಯಾದಿಗಳಿಗೆ ಮಾರಾಟ ತೆರಿಗೆ ವಿನಾಯತಿ ನೀಡಿದೆ. ರಾಜ್ಯ ವಲಯ ಉದ್ಯಮಗಳಲ್ಲಿ ಶಕ್ತಿ ಪರಿರಕ್ಷಣಾ ಕ್ರಮಗಳ ಬಗ್ಗೆ ಸಲಹೆ ನೀಡಲು ಸಮಿತಿಯೊಂದನ್ನು ರಚಿಸಲಾಗಿದೆ. ಕೊರೆ ಬಾವಿಗಳಿಂದ ನೀರೆತ್ತುವ ಹ್ಯಾಂಡ್ ಪಂಪುಗಳು ಆಗಾಗ್ಗೆ ಕೆಟ್ಟು ಹೋಗುವುದನ್ನು ತಡೆಯುವುದ ಕ್ಕಾಗಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಾಂತ್ರಿಕ ಪರಿಷತ್ತು ಒಂದು ಹೊಸ ಮಾದರಿಯ ಹ್ಯಾಂಡ್ ಪಂಪನ್ನು ಕಂಡುಹಿಡಿದಿದೆ. ಈ ಹೊಸ ಮಾದರಿಯ ಹ್ಯಾಂಡ್‌ಪಂಪುಗಳ ಕಾರ್ಯನಿರ್ವಹಣೆಯನ್ನು ಪರೀಕ್ಷಿಸುವುದಕ್ಕಾಗಿ ಮೂವತ್ತು ಹ್ಯಾಂಡ್‌ಪಂಪುಗಳನ್ನು ಅಳವಡಿಸಲಾಗಿದೆ.

9. ಅರಣ್ಯ ಇಲಾಖೆಯು ಕೈಗೊಂಡಿರುವ ವನನಿರ್ಮಾಣ ಕಾರ್ಯವನ್ನು ತೀವ್ರಗೊಳಿಸುವುದರ ಜೊತೆಗೆ ಸಮಾಜ ವನ ನಿರ್ಮಾಣ ಕಾರ್ಯದ ದೆಸೆಯಲ್ಲೂ ತೀವ್ರ ಪ್ರಯತ್ನ ಮಾಡಲಾಗಿದೆ. ರಸ್ತೆ ಬದಿಗಳಲ್ಲಿ, ಕಾಲುವೆ-ದಡಗಳಲ್ಲಿ, ಕೆರೆ ದಂಡೆಗಳಲ್ಲಿ, ಪಂಚಾಯತಿ ಭೂಮಿಗಳಲ್ಲಿ ಮತ್ತು ಗೋಮಾಳ ಗಳಲ್ಲಿ ಭಾರಿ ಪ್ರಮಾಣದಲ್ಲಿ ಸಸಿ ನೆಡುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಸಸಿ ನೆಡಬಯಸುವ ರೈತರಿಗೆ ಸಸಿಗಳನ್ನು ಉಚಿತವಾಗಿ ಒದಗಿಸಲಾಗುತ್ತದೆ. ವೃಕ್ಷ ಸಂರಕ್ಷಣಾ ಅಧಿನಿಯಮದ ಮೇರೆಗೆ ಪ್ರತಿಯೊಬ್ಬ ಭೂ ಹಿಡುವಳಿದಾರನು ಕೃಷಿ ಭೂಮಿಯಲ್ಲಿ ಹೆಕ್ಟೇರೊಂದಕ್ಕೆ 10 ಸಸಿಗಳನ್ನು ಮತ್ತು ಕೃಷಿ ಯೇತರ ಭೂಮಿಗಳಲ್ಲಿ ಹೆಕ್ಟೇರೊಂದಕ್ಕೆ 25 ಸಸಿಗಳನ್ನು ನೆಡಬೇಕೆಂಬುದಾಗಿ ಕಡ್ಡಾಯಪಡಿಸಲಾಗಿದೆ.

9.1. ಈ ವರ್ಷ ಮಿಸಲು ಅರಣ್ಯಗಳೊಳಗೆ ಮತ್ತು ಅವುಗಳ ಹೊರಗೆ ಅಧಿಕ ಸಂಖ್ಯೆಯಲ್ಲಿ ಮರ ನೆಡುವ ನಮ್ಮ ಕಾರ್ಯಕ್ರಮದ ಅಂಗವಾಗಿ ಅರಣ್ಯ ಇಲಾಖೆಯವರು ಹನ್ನೆರಡು ಕೋಟಿ ಸಸಿ ಗಳನ್ನು ಬೆಳೆಸಿದ್ದಾರೆ.

10. ಗ್ರಾಮಾಂತರ ನೀರು ಸರಬರಾಜು ಕಾರ್ಯದಲ್ಲಿ ಗಣನೀಯ ಪ್ರಗತಿ ಸಾಧಿಸಲಾಗಿದೆ. 1981-82ರಲ್ಲಿ ಕೇಂದ್ರ ಮತ್ತು ರಾಜ್ಯ ವಲಯಗಳಲ್ಲಿ ಭಾರಿ ಪ್ರಮಾಣದಲ್ಲಿ ಕೊಳಾಯಿ ನೀರು ಸರಬ ರಾಜು ಯೋಜನೆ ಮತ್ತು ಕೊರೆ ಬಾವಿ ಯೋಜನೆಗಳನ್ನು ಮಂಜೂರು ಮಾಡುವುದು ನಮಗೆ ಸಾಧ್ಯ ವಾಗಿದೆ. ಆರನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಪ್ರತಿಯೊಂದು ಗ್ರಾಮಕ್ಕೂ ಮತ್ತು ಮುಖ್ಯ ಗ್ರಾಮಗಳಲ್ಲಿ ಹೊಸದಾಗಿ ನಿರ್ಮಿಸಿದ ಜನತಾ ಗೃಹಗಳ ಕಾಲನಿಗಳಿಗೂ ಸುರಕ್ಷಿತ, ಸುನಿಶ್ಚಿತ ಮತ್ತು ಸುಲಭಸಾಧ್ಯ ನೀರು ಸರಬರಾಜಿನ ವ್ಯವಸ್ಥೆ ಮಾಡುವುದು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಬಹುದು.

11. ರಾಜ್ಯದ ಎಲ್ಲ ಪಟ್ಟಣಗಳಿಗೂ ಸುರಕ್ಷಿತ ನೀರು ಸರಬರಾಜಿನ ವ್ಯವಸ್ಥೆ ಮಾಡಲಾಗಿದೆ. 1980ರ ಜನವರಿ 1 ರಿಂದ ಈಚೆಗೆ 84 ನೀರು ಸರಬರಾಜು ಯೋಜನೆಗಳನ್ನು ಮತ್ತು 13 ಒಳಚರಂಡಿ ಯೋಜನೆಗಳನ್ನು ಮಂಜೂರು ಮಾಡಲಾಗಿದೆ. ಪರಸ್ಪರ ಸಹಾಯ ಯೋಜನೆಯ ಮೇರೆಗೆ 38.40 ಕೋಟಿ ರೂ. ವೆಚ್ಚದ ಮೈಸೂರು, ಕುಮಟ-ಹೊನ್ನಾವರ ಮತ್ತು ಹುಕ್ಕೇರಿ-ಸಂಕೇಶ್ವರ, ಈ ಮೂರು ಬೃಹತ್ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

11.1 ಬೆಂಗಳೂರು ನಗರಕ್ಕೆ ದಿನವೊಂದಕ್ಕೆ 30 ಮಿಲಿಯ ಗ್ಯಾಲನ್ ಹೆಚ್ಚು ನೀರನ್ನು ಪೂರೈ ಸುವ 55.55 ಕೋಟಿ ರೂ. ವೆಚ್ಚದ ಕಾವೇರಿ IIನೇ ಹಂತದ ನೀರು ಸರಬರಾಜು ಯೋಜನೆಯ ಕಾರ್ಯವು ಪ್ರಗತಿಯಲ್ಲಿದೆ ಮತ್ತು ಕಾರ್ಯವು 1982ರ ಜುಲೈ ಸುಮಾರಿಗೆ ಪೂರೈಸುವ ನಿರೀಕ್ಷೆಯಿದೆ.

12. ಬೆಂಗಳೂರು ನಗರದ ಸೂಕ್ತ ಮತ್ತು ಕ್ರಮಬದ್ಧ ಅಭಿವೃದ್ಧಿ ಕಾರ್ಯ ಯೋಜನೆ, ಕಾರ್ಯ ಸಮನ್ವಯ ಮತ್ತು ಕಾರ್ಯ ಪರಿವೀಕ್ಷಣೆಗಾಗಿ ಬೆಂಗಳೂರು ಮಹಾನಗರ ಅಭಿವೃದ್ಧಿ ಪ್ರಾಧಿಕಾರವೆಂಬ ಉನ್ನತಾಧಿಕಾರದ ಶೃಂಗ ಸಂಸ್ಥೆಯೊಂದನ್ನು ರಚಿಸಲಾಗಿದೆ.

13. ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ರಚಿತವಾದಂದಿನಿಂದ 1979ರ ಡಿಸೆಂಬರ್ ಕೊನೆಯವರೆಗೆ 46.50 ಲಕ್ಷ ರೂ. ವೆಚ್ಚದ ಯೋಜನೆಗಳನ್ನು ತಯಾರಿಸಿದ್ದು, 648 ವಾಸದ ಮನೆಗಳ ನಿರ್ಮಾಣಕ್ಕಾಗಿ 'ಹುಡ್ಕೋ' ದಿಂದ 40.60 ಲಕ್ಷ ರೂ.ಗಳ ಸಾಲ ಸೌಲಭ್ಯ ಪಡೆಯಿತು. 1981–82ರ ಒಂದು ವರ್ಷದ ಅವಧಿಯಲ್ಲಿ 9,348 ವಾಸದ ಮನೆಗಳನ್ನು ಕಟ್ಟುವುದಕ್ಕಾಗಿ 31 ಯೋಜನೆಗಳನ್ನು ಸರ್ಕಾರವು ಅನುಮೋದಿಸಿದೆ. ಮತ್ತು ಮಂಡಳಿಯು 16 ಯೋಜನೆಗಳಿಗಾಗಿ 'ಹುಡ್ಕೋ' ದಿಂದ 3.68 ಕೋಟಿ ರೂ. ಮಂಜೂರಾತಿ ಪಡೆಯಿತು, 2.49 ಕೋಟಿ ರೂ. ಹೆಚ್ಚಿನ ಸಾಲಕ್ಕಾಗಿ ಹುಡ್ಕೋದವರನ್ನು ಕೇಳಿಕೊಳ್ಳಲಾಗಿದೆ.

14. ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು 11.571 ಮನೆಗಳನ್ನು ಕಟ್ಟುವ 32 ಸಂಯುಕ್ತ ಗೃಹ ನಿರ್ಮಾಣ ಯೋಜನೆಗಳಿಗಾಗಿ 'ಹುಡ್ಕೊ' ದಿಂದ 1974 ರಿಂದ 1980ರ ಮಾರ್ಚ್ ವರೆಗೆ 14.30 ಕೋಟಿ ರೂ. ಸಾಲ ಪಡೆಯಿತು. 1981ರ ಜನವರಿಯಿಂದ ಡಿಸೆಂಬರ್‌ವರೆಗಿನ ಒಂದು ವರ್ಷದ ಅವಧಿಯಲ್ಲಿ 12.468 ಮನೆಗಳನ್ನು ಕಟ್ಟುವುದಕ್ಕಾಗಿ ಒಟ್ಟು 19.47 ಕೋಟಿ ರೂ. ಅಂದಾಜು ವೆಚ್ಚದ 25 ಯೋಜನೆಗಳಿಗೆ ಸರ್ಕಾರವು ಅನುಮೋದನೆ ನೀಡಿದೆ. 'ಹುಡ್ಕೊ' ಈಗಾಗಲೇ 15 ಯೋಜನೆಗಳಿಗೆ ಒಪ್ಪಿಗೆ ನೀಡಿದೆ. ಈ ಬಗ್ಗೆ 9 ಕೋಟಿ ರೂ. ಮಂಜೂರು ಮಾಡಿದೆ. 'ಹುಡ್ಕೊ' ಯೋಜನೆಗಳ ಹೊರತಾಗಿ ಮಂಡಳಿಯು ರಾಜ್ಯ ಯೋಜನೆಯ ಮೇರೆಗೆ 4.21 ಕೋಟಿ ರೂ. ಒಟ್ಟು ವೆಚ್ಚದ 2.521 ಮನೆಗಳ ನಿರ್ಮಾಣ ಕಾರ್ಯವನ್ನು ಕೈಕೊಂಡಿದೆ.

15. ಜನತಾ ಗೃಹ ನಿರ್ಮಾಣ ಕಾರ್ಯಕ್ರಮದ ಮೇರೆಗೆ ಅಪೂರ್ಣವಾಗಿರುವ ಗೃಹ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾರ್ಯಕ್ಕೆ ವಿಶೇಷ ಆದ್ಯತೆ ನೀಡಲಾಗಿದೆ. 1973ರ ಏಪ್ರಿಲ್‌ನಿಂದ 1979ರ ಡಿಸೆಂಬರ್‌ವರೆಗಿನ ಅವಧಿಯಲ್ಲಿ ವರ್ಷವೊಂದಕ್ಕೆ ಸರಾಸರಿ 29,000 ಮನೆಗಳಂತೆ 1.58 ಲಕ್ಷ ಮನೆಗಳ ನಿರ್ಮಾಣ ಕಾರ್ಯವನ್ನಷ್ಟು ಮಾತ್ರ ಪೂರ್ಣಗೊಳಿಸಲಾಯಿತು. ತದನಂತರ ಪ್ರಗತಿಯ ಗತಿಯನ್ನು ಕ್ಷಿಪ್ರಗೊಳಿಸಲಾಯಿತು ಮತ್ತು 1980ರ ಜನವರಿಯಿಂದ 1981ರ ಅಕ್ಟೋಬರ್ ಅವಧಿಯಲ್ಲಿ 1.18 ಲಕ್ಷ ಮನೆಗಳ ನಿರ್ಮಾಣಕಾರ್ಯವನ್ನು ಪೂರ್ಣಗೊಳಿಸಲಾಯಿತು. ಹೀಗೆ ಈ ಯೋಜನೆಯು ಪ್ರಾರಂಭವಾದಂದಿನಿಂದ ಒಟ್ಟು 2.76 ಲಕ್ಷ ಮನೆಗಳ ನಿರ್ಮಾಣ ಕಾರ್ಯ ಪೂರೈಸಿದಂತಾಯಿತು ಇವುಗಳ ಪೈಕಿ ಸುಮಾರು ಶೇಕಡ 44 ರಷ್ಟು ಮನೆಗಳನ್ನು ಹರಿಜನ ಮತ್ತು ಗಿರಿಜನರಿಗೆ ಒದಗಿಸಲಾಗಿದೆ. ನಾವು 1981–82ರ ಅವಧಿಗೆ ಒಂದು ಲಕ್ಷ ಮನೆಗಳ ನಿರ್ಮಾಣ ಕಾರ್ಯಕ್ಕೆ ಮಂಜೂರಾತಿ ನೀಡಿದ್ದೇವೆ.

16. 31–3–1980ರ ಹೊತ್ತಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಯಿಲ್ಲದ ಮತ್ತು ಮನೆ ನಿವೇಶನವಿಲ್ಲದ 10.40 ಲಕ್ಷ ಕುಟುಂಬಗಳನ್ನು ಗುರುತಿಸಲಾಗಿದೆ. ಇದೇ ರೀತಿ ಗುರುತಿಸುವ ಇನ್ನೊಂದು ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು ಮತ್ತು ಆ ಒಟ್ಟು ಸಂಖ್ಯೆ 30–9–1981ರ ವರೆಗೆ 11.38 ಲಕ್ಷಕ್ಕೆ ಏರಿದೆಯಾಗಿ ಕಂಡುಬಂತು. ಮನೆ ನಿವೇಶನ ಹಂಚಿಕೆಯ ಸಂಬಂಧದಲ್ಲಿ 1980–81ರ ಸಲುವಾಗಿ 30.000 ಮನೆ ನಿವೇಶನಗಳ ಹಂಚಿಕೆಯ ಗುರಿ ಇಟ್ಟುಕೊಳ್ಳಲಾಗಿದ್ದರೂ, 46,000 ಮನೆ ನಿವೇಶನಗಳನ್ನು ಹಂಚಲಾಯಿತು. ಹೀಗಾಗಿ 1981ರ ಮಾರ್ಚ್ ಅಂತ್ಯದವರೆಗೆ 9.29 ಲಕ್ಷ ನಿವೇಶನಗಳನ್ನು ಹಂಚಿದಂತಾಯಿತು. 1981ರ ಸೆಪ್ಟೆಂಬರ್ ಸುಮಾರಿಗೆ ಈ ಸಂಖ್ಯೆಯು 9.45 ಲಕ್ಷಕ್ಕೆ ಏರಿದೆ. ಇವುಗಳ ಪೈಕಿ ಶೇಕಡ 40ರಷ್ಟು ನಿವೇಶನಗಳನ್ನು ಹರಿಜನ ಮತ್ತು ಗಿರಿಜನರಿಗೆ ಹಂಚಿಕೊಡಲಾಗಿದೆ. 1983ರೊಳಗಾಗಿ ಮನೆಗಳಿಲ್ಲದ ಮತ್ತು ಮನೆ ನಿವೇಶನಗಳಿಲ್ಲದ ಎಲ್ಲ ಕುಟುಂಬಗಳಿಗೆ ಮನೆ ನಿವೇಶನಗಳನ್ನು ನೀಡಲು ನಾವು ನಿರ್ಧರಿಸಿದ್ದೇವೆ.

17. ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಜನವರ್ಗದ ಹಿತಾಶಕ್ತಿಗೆ ಗಮನ ನೀಡಲಾಗಿದೆ. ಈ ವರ್ಷ 600 ಮನೆಗಳ ನಿರ್ಮಾಣಕ್ಕೂ ಮತ್ತು 2,400 ಮನೆಗಳ ಅಭಿವೃದ್ಧಿ ಕಾರ್ಯಕ್ರಮಕ್ಕೂ ಮಂಜೂರಾತಿ ನೀಡಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆರ್ಥಿಕ ದುರ್ಬಲ ವರ್ಗಗಳಿಗೆ ಮನೆಗಳನ್ನು ಕಟ್ಟುವ ಬೃಹತ್ ಕಾರ್ಯಕ್ರಮವನ್ನು ಕೈಗೊಂಡಿದೆ.

18. ಗ್ರಾಮಾಂತರ ಪ್ರದೇಶಗಳಲ್ಲಿ ದಾರಿದ್ರ್ಯ ಮತ್ತು ನಿರುದ್ಯೋಗವನ್ನು ನಿವಾರಿಸುವುದಕ್ಕಾಗಿ ವ್ಯವಸ್ಥಿತ ಕ್ರಮಗಳನ್ನು ಅನುಸರಿಸಲಾಗುತ್ತಿದೆ. ಈ ಉದ್ದೇಶವನ್ನು ಸಾಧಿಸಲು ಸಮಗ್ರ ಗ್ರಾಮೀಣ ಅಭಿವೃದ್ಧಿ ಮತ್ತು ಕ್ಷಾಮ ಪೀಡಿತ ಪ್ರದೇಶ ಕಾರ್ಯಕ್ರಮಗಳು ಮತ್ತು ಸ್ವಯಂ ಉದ್ಯೋಗಕ್ಕಾಗಿ ಗ್ರಾಮೀಣ ಯುವಕರಿಗೆ ತರಬೇತಿ ನೀಡುವ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ—ಇವುಗಳ ಪೂರ್ಣ ಪ್ರಯೋಜನವನ್ನು ಪಡೆಯಲಾಗಿದೆ. ಈ ಕಾರ್ಯಕ್ರಮಗಳಿಗೆ ನೆರವು ನೀಡುವಂತೆ ವಾಣಿಜ್ಯ ಬ್ಯಾಂಕುಗಳನ್ನು ಕೇಳಿಕೊಳ್ಳಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿಯ ಮೇರೆಗೆ ಕುಟುಂಬಗಳನ್ನು ಗುರುತಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದೆ.

18.1. ಸದ್ಯ 46 ತಾಲ್ಲೂಕುಗಳನ್ನು ಕ್ಷಾಮ ಪೀಡಿತ ಪ್ರದೇಶ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಇನ್ನೂ 53 ತಾಲ್ಲೂಕುಗಳನ್ನು ಈ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡಿಸಬೇಕೆಂದು ಭಾರತ ಸರ್ಕಾರವನ್ನು ನಾವು ವಿನಂತಿಸಿಕೊಂಡಿದ್ದೇವೆ.

18.2 ದಾರಿದ್ರ್ಯ ಮತ್ತು ಗ್ರಾಮಾಂತರ ನಿರುದ್ಯೋಗ ನಿವಾರಣೆಯ ಕಾರ್ಯಕ್ರಮದ ಪ್ರಗತಿಯನ್ನು ಕ್ಷಿಪ್ರಗೊಳಿಸುವ ಗುರಿಹೊಂದಿರುವ ಈ ಪ್ರಮುಖ ಕಾರ್ಯಕ್ರಮಗಳಿಗಾಗಿ ಮೀಸಲಿರಿಸಿದ ಸಂಪನ್ಮೂಲಗಳನ್ನು ಇನ್ನಷ್ಟು ದಕ್ಷ ರೀತಿಯಲ್ಲಿ ಬಳಸಿಕೊಳ್ಳಲು ಸಾಧ್ಯವಾಗುವಂತೆ ಕ್ಷೇತ್ರ ಮತ್ತು ಜಿಲ್ಲಾ ಮಟ್ಟದಲ್ಲಿ ಆಡಳಿತವನ್ನು ಬಿಗಿಗೊಳಿಸುವಂಥ ಕ್ರಮಗಳನ್ನು ನಾವು ಶೀಘ್ರವೇ ಘೋಷಿಸಲಿದ್ದೇವೆ.

19. ಗ್ರಾಮಾಂತರ ಪ್ರದೇಶಗಳಲ್ಲಿ ಯಾವುದೇ ಅಭಿವೃದ್ಧಿಯನ್ನು ಸಾಧಿಸಲು, ಸಾಕಷ್ಟು ಸಾಲ ಸೌಲಭ್ಯ ಮತ್ತು ಮಾರುಕಟ್ಟೆ ಸೌಕರ್ಯಗಳನ್ನು ಒದಗಿಸುವುದು ಅವಶ್ಯಕವಾಗಿದೆ. ಸರ್ಕಾರಕ್ಕೆ ಮತ್ತು ಸಹಕಾರ ಸಂಸ್ಥೆಗಳಿಗೆ ಸಂದಾಯವಾಗಬೇಕಾದ ಬಾಕಿಗಳನ್ನು ಸಂದಾಯ ಮಾಡದಿರುವ ಪ್ರವೃತ್ತಿಯು ಕೆಲವರಲ್ಲಿ ಹೆಚ್ಚಾಗುತ್ತಿದೆಯೆಂಬ ಸಂಗತಿಯನ್ನು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳಬಯಸುತ್ತೇನೆ. ಈ ಪ್ರವೃತ್ತಿಯ ಪರಿಣಾಮವಾಗಿ 1980–81ನೇ ಸಾಲಿನಲ್ಲಿ ಭಾರತದ ರಿಸರ್ವ್ ಬ್ಯಾಂಕಿನವರು ಹೊಸ ಸಾಲ ಸೌಲಭ್ಯ ಪಡೆಯಲು ಗೊತ್ತುಪಡಿಸಿದ ನಿಬಂಧನೆಗಳನ್ನು ಪಾಲಿಸಲು ಬಿ.ಡಿ.ಸಿ.ಸಿ. ಬ್ಯಾಂಕುಗಳಿಗೆ ಸಾಧ್ಯವಾಗದೆ ಹೋಯಿತು. ಸಹಕಾರ ಸಂಸ್ಥೆಗಳಿಗೆ ಮತ್ತು ಸರಕಾರಕ್ಕೆ ಸಂದಾಯವಾಗಬೇಕಾದ ಬಾಕಿಗಳನ್ನು ಹಿಂತಿರುಗಿ ಕೊಡದಿದ್ದರೆ ಹೊಸ ಸಾಲಗಳನ್ನು ನೀಡಲು ಸಾಧ್ಯವಾಗುವುದಿಲ್ಲ, ಇದರಿಂದಾಗಿ ಸಮಾಜದ ದುರ್ಬಲ ವರ್ಗಗಳ ಹಿತಸಾಧನೆಗೆ ಪ್ರತಿಕೂಲ ಪರಿಣಾಮವುಂಟಾಗುವುದು. ವಿಶೇಷ ಸಾಲ ವಸೂಲಿ ಕ್ರಮಗಳನ್ನು ಕೈಕೊಳ್ಳಲು ಡೆಪ್ಯುಟಿ ಕಮಿಷನರವರಿಗೆ ಕಟ್ಟುನಿಟ್ಟಾಗಿ ಸೂಚನೆ ನೀಡಲಾಗಿದೆ. ಉದ್ದೇಶ ಪೂರ್ವಕವಾಗಿ ಸಾಲ ಮರುಸಂದಾಯ ಮಾಡದಿರುವವರು ಮತ್ತು ಶ್ರೀಮಂತರಾಗಿದ್ದು ಸಾಲ ಮರು ಸಂದಾಯ ಮಾಡಲು ತಪ್ಪುವವರ ವಿಚಾರದಲ್ಲಿ ಯಾವುದೇ ರಿಯಾಯಿತಿ ತೋರಿಸಕೂಡದೆಂದು ಆದೇಶ ನೀಡಲಾಗಿದೆ. ಆದರೆ ಅಂಥವರಲ್ಲಿ ಬಡವರಿಗೆ ಯಾವುದೇ ಕಿರುಕುಳ ಕೊಡಕೂಡದೆಂದೂ ನಿರ್ದೇಶಿಸಲಾಗಿದೆ.

20. ಎ.ಆರ್.ಡಿ.ಸಿ. ವಾಣಿಜ್ಯ ಬ್ಯಾಂಕುಗಳ ಸಹಯೋಗ ಮತ್ತು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಸಹಾಯ ಧನ ಪಡೆದು, ಗ್ರಾಮಾಂತರ ಉಗ್ರಾಣಗಳ ರಾಷ್ಟ್ರೀಯ ವ್ಯವಸ್ಥೆಯೊಂದನ್ನು ರಚಿಸುವ ಪ್ರಮುಖ ಕಾರ್ಯಕ್ರಮವನ್ನು ಅಂತಿಮಗೊಳಿಸಲಾಗುತ್ತಿದ್ದು, ಆ ಕುರಿತು ಮಂಜೂರಾತಿಗಾಗಿ ಭಾರತ ಸರ್ಕಾರಕ್ಕೆ ಪ್ರಸ್ತಾವವನ್ನು ಕಳಿಸಿಕೊಡಲಾಗುವುದು. ಈ ವ್ಯವಸ್ಥೆಯು ಸಮಗ್ರ ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆಯ ಬುನಾದಿಯನ್ನು ಬಲಗೊಳಿಸುವ ಕಾರ್ಯಕ್ರಮದ ಒಂದು ಮುಖ್ಯ ಅಂಗವಾಗಿದೆ.

21. 1980–81ನೇ ಸಾಲಿನಲ್ಲಿ ಧಾನ್ಯಗಳ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆಯು 57.76 ಲಕ್ಷ ಟನ್ನುಗಳಾಗಿತ್ತು. ರಾಜ್ಯದ ಕೆಲವು ಪ್ರದೇಶಗಳಲ್ಲಿ ಋತುಮಾನ ಪರಿಸ್ಥಿತಿ ಪ್ರತಿಕೂಲವಾಗಿದ್ದರೂ 1981–82ನೇ ಸಾಲಿನಲ್ಲಿ, ಉತ್ಪಾದನೆಯು 67.03 ಲಕ್ಷ ಟನ್ನುಗಳಷ್ಟಾಗುವ ನಿರೀಕ್ಷೆಯಿದೆ.

21.1. ಖುಷ್ಕಿ ಜಮೀನು ವ್ಯವಸಾಯದ ಬಗ್ಗೆ ವಿಶ್ವಬ್ಯಾಂಕು ನೆರವಿನಿಂದ ಕಾರ್ಯಗತಗೊಳಿಸಲಾಗುವ ಒಂದು ಯೋಜನೆಯನ್ನು ತಯಾರಿಸಲಾಗುತ್ತಿದೆ. ಮೊದಲ ಹಂತವಾಗಿ, ಈ ಯೋಜನೆಗೆ ಸುಮಾರು 50 000 ಹೆಕ್ಟೇರು ಜಮೀನನ್ನು ಒಳಪಡಿಸಲಾಗುವುದು ಮತ್ತು ಈ ಯೋಜನೆಯಲ್ಲಿ ಒಡ್ಡು

ಗಳ ನಿರ್ಮಾಣ, ಕೊರಕಲು ಮುಚ್ಚುವಿಕೆ, ವನನಿರ್ಮಾಣ, ಕೃಷಿ ಕೊಳಗಳ ನಿರ್ಮಾಣ ಮತ್ತು ಕಂದಕಗಳ ನಿರ್ಮಾಣ, ಅಲ್ಪಕಾಲಿಕ ಪದ್ಧತಿ ಬೆಳೆಗಳನ್ನು ಬೆಳೆಸುವುದೇ ಮುಂತಾದವುಗಳು ಸೇರಿವೆ. ಈ ಎಲ್ಲ ಪದ್ಧತಿಗಳು ಖುಷ್ಕಿ ಜಮಿನಿನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗುತ್ತವೆ.

22. ತೋಟಗಾರಿಕೆ ಬೆಳೆಗಳು ನಿವ್ವಳ ಬಿತ್ತನೆ ಪ್ರದೇಶದ ಕೇವಲ ಶೇಕಡಾ 9ರಷ್ಟು ವಿಸ್ತೀರ್ಣಕ್ಕೆ ಸೀಮಿತವಾಗಿದ್ದರೂ, ಕೃಷಿ ವಲಯದಿಂದ ಬರುವ ರಾಜ್ಯದ ಆದಾಯದ ಸುಮಾರು ಶೇಕಡಾ 30ರಷ್ಟು ಭಾಗ ಈ ಬೆಳೆಗಳಿಂದ ಬರುತ್ತದೆ. ವಿಶೇಷವಾಗಿ ಗ್ರಾಮಾಂತರ ದುರ್ಬಲ ವರ್ಗದವರಿಗೆ ಸುಧಾರಿತ ಬಿತ್ತನೆ ಸಾಮಗ್ರಿಗಳನ್ನು ಮತ್ತು ತಾಂತ್ರಿಕ ಮಾರ್ಗದರ್ಶನವನ್ನು ಒದಗಿಸಿ, ತೆಂಗು ಕೃಷಿಯನ್ನು ಮತ್ತು ಹಣ್ಣುಗಳ ಹಾಗೂ ತರಕಾರಿಗಳ ಕೃಷಿಯನ್ನು ಅಭಿವೃದ್ಧಿಪಡಿಸುವ ವಿಶೇಷ ಯೋಜನೆಗಳನ್ನು ಕೈಕೊಳ್ಳಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯು, ವಿಶ್ವಬ್ಯಾಂಕಿನಿಂದ ನೆರವು ಪಡೆದ ಗೋಡಂಬಿ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಕಟ್ಟಡಗಳ ಆವರಣಗಳಲ್ಲಿ ಗಿಡ ನೆಡುವ ಮೂಲಕ ನಗರಗಳ ಪರಿಸರ ರಕ್ಷಣೆಗಾಗಿಯೂ ಸತತ ಪ್ರಯತ್ನ ಮಾಡಲಾಗುತ್ತಿದೆ.

23, ಹರಿಜನ/ಗಿರಿಜನ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಾಧನೆಗೆ ಸುನಿಶ್ಚಿತ ಕ್ರಮಕೈಗೊಳ್ಳಲಾಗಿದೆ. ಹರಿಜನ/ಗಿರಿಜನರಿಗಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಟ ಮ್ಯಾಟ್ರಿಕ್ ನಂತರದ ಒಂದು ವಿದ್ಯಾರ್ಥಿನಿಲಯವನ್ನು ನಿರ್ಮಿಸಲು ನಿರ್ಧರಿಸಿದ್ದೇವೆ. ಹರಿಜನ/ಗಿರಿಜನರ ಪ್ರಯೋಜನಾರ್ಥ, 726 ಮಹಿಳಾ ಕಲ್ಯಾಣ ಕೇಂದ್ರಗಳನ್ನು, 57 ತರಬೇತಿ ಕೇಂದ್ರಗಳನ್ನು, 7 ಉಡುಪು ಉತ್ಪಾದನಾ ಘಟಕಗಳನ್ನು ಮತ್ತು 7 ತೆಂಗುನಾರು ಘಟಕಗಳನ್ನು ನಿರ್ವಹಿಸಲಾಗುತ್ತದೆ. ಹರಿಜನ/ಗಿರಿಜನರಿಗಾಗಿ ಗೃಹ ನಿರ್ಮಾಣ ಮತ್ತು ಗೃಹಗಳ ವಿದ್ಯುದೀಕರಣ ಯೋಜನೆಗಳ ಮೇರೆಗೆ ವಿವಿಧ ಕಾರ್ಯ ಕ್ರಮಗಳನ್ನು ಸಹ ಕೈಕೊಳ್ಳಲಾಗಿದೆ. ಹರಿಜನ/ಗಿರಿಜನ ಬಾಲಕರ ಮತ್ತು ಬಾಲಕಿಯರ ಸೌಕರ್ಯಕ್ಕಾಗಿ 384 ಮ್ಯಾಟ್ರಿಕ್ ಪೂರ್ವ ಮತ್ತು 177 ಮ್ಯಾಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಮತ್ತು 172 ಮ್ಯಾಟ್ರಿಕ್ ಪೂರ್ವ ಮತ್ತು 15 ಮ್ಯಾಟ್ರಿಕ್ ನಂತರದ ಸಹಾಯಾನುದಾನ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಈ ವಿದ್ಯಾರ್ಥಿನಿಲಯಗಳ ಪೈಕಿ 1981–82ನೇ ವರ್ಷದಲ್ಲಿ 15 ಮ್ಯಾಟ್ರಿಕ್ ಪೂರ್ವ ಸರ್ಕಾರಿ ವಿದ್ಯಾರ್ಥಿನಿಲಯಗಳಿಗೆ ಮತ್ತು 5 ಮ್ಯಾಟ್ರಿಕ್ ನಂತರದ ಸರ್ಕಾರಿ ವಿದ್ಯಾರ್ಥಿನಿಲಯಗಳಿಗೆ ಮಂಜೂರಾತಿ ನೀಡಲಾಯಿತು. ಕರ್ನಾಟಕ ರಾಜ್ಯ ಹರಿಜನ/ಗಿರಿಜನ ನಿಗಮವು 44.59 ಲಕ್ಷ ರೂಪಾಯಿ ಮೊತ್ತದ ಸಾಲವನ್ನು ಸುಮಾರು 20.000 ಜನರಿಗೆ ಮಂಜೂರು ಮಾಡಿದೆ. ಹರಿಜನರು ದಾರಿದ್ರ್ಯ ರೇಖೆಯನ್ನು ದಾಟಲು ಅನುಕೂಲವಾಗುವಂತೆ ಆರನೇ ಯೋಜನಾ ಅವಧಿಯಲ್ಲಿ ಅವರಿಗಾಗಿ 137.67 ಕೋಟಿ ರೂಪಾಯಿ ವೆಚ್ಚದ ವಿಶೇಷ ಸಹಯೋಗ ಯೋಜನೆಯನ್ನು ತಯಾರಿಸಲಾಗಿದೆ. ಗಿರಿಜನರ ಅಭಿವೃದ್ಧಿಯ ಸಲುವಾಗಿಯೇ 4.20 ಕೋಟಿ ರೂ. ವೆಚ್ಚದ ಗಿರಿಜನ ಉಪಯೋಜನೆಯೊಂದನ್ನು ರೂಪಿಸಲಾಗಿದೆ.

24. ಹಿಂದುಳಿದ ವರ್ಗಗಳಿಗಾಗಿ ಮತ್ತು ಅಲ್ಪಸಂಖ್ಯಾತರಿಗಾಗಿ ಈಗಿರುವ 328 ಮ್ಯಾಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಮತ್ತು 59 ಮ್ಯಾಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಹೆಚ್ಚಿಗೆಯಾಗಿ 1981–82ರಲ್ಲಿ ಇನ್ನೂ 10 ಮ್ಯಾಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಮತ್ತು 5 ಮ್ಯಾಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿದ್ದೇವೆ.

25. ಅಂಗ ವಿಕಲರ ವರ್ಷವಾದ 1981ನೇ ಸಾಲಿನಲ್ಲಿ, ಅಂಗವಿಕಲ ಉದ್ಯಮ ಸಾಹಸಿಗಳಿಗೆ ಮೂಲಧನ ಯೋಜನೆ, ಅಂಗವಿಕಲರಿಗಾಗಿ ತಾತ್ಕಾಲಿಕ ವಸತಿಗೃಹಗಳು, ಅಂಗವಿಕಲ ಉದ್ಯೋಗಿಗಳಿಗಾಗಿ ವಸತಿ ಗೃಹಗಳು ಮತ್ತು ಕಿವುಡ ಮಕ್ಕಳಿಗಾಗಿ ಒಂದು ಯೋಜನೆ—ಇಂಥ ಹೊಸ ಯೋಜನೆಗಳನ್ನು ಕೈಕೊಳ್ಳಲಾಗಿದೆ. ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಮತ್ತು ಸಾಧನ ಸಲಕರಣೆಗಳನ್ನು ಖರೀದಿ ಮಾಡಲು ಧನ ಸಹಾಯವನ್ನು ಮತ್ತು ಅಂಗವಿಕಲರಿಗೆ ಜೀವನಾಂಶ ಭತ್ಯವನ್ನು ಮಂಜೂರು ಮಾಡಿದೆ.

26, ನಮ್ಮ ರಾಜ್ಯದಲ್ಲಿ 62,699 ಜೀತಕಾರ್ಮಿಕರನ್ನು ಗುರ್ತಿಸಲಾಗಿದ್ದು ಅವರೆಲ್ಲರನ್ನೂ ಜೀತದಿಂದ ಬಿಡುಗಡೆ ಮಾಡಲಾಗಿದೆ. ರಾಜ್ಯದ ಮತ್ತು ಕೇಂದ್ರದ ಕಾರ್ಯ ಯೋಜನೆಯ ಮೂಲಕ ಇದುವರೆಗೆ 22,790 ಜೀತ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಿದ್ದೇವೆ. ಅವರ ಪೈಕಿ 4,951 ಜನರಿಗೆ

1981–82ರಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ. ಉಳಿದ ಎಲ್ಲ ಜೀತ ವಿಮುಕ್ತ ಕಾರ್ಮಿಕರಿಗೆ ಮುಂದಿಗೆ ಎರಡು ವರ್ಷಗಳಲ್ಲಿ ಪುನರ್ವಸತಿ ಕಲ್ಪಿಸಬಹುದೆಂದು ನಿರೀಕ್ಷಿಸುತ್ತೇವೆ. ಜೀತಮುಕ್ತ ಕಾರ್ಮಿಕರಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವ ದೃಷ್ಟಿಯಿಂದ, 1977ರ ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಯನ್ನು (ಸಾಮಾನ್ಯ ನೇಮಕಾತಿ ನಿಯಮಾವಳಿ) ತಿದ್ದುಪಡಿಮಾಡಿ ಜೀತ ಕಾರ್ಮಿಕರ ಸಂಬಂಧದಲ್ಲಿ ವಯೋಮಿತಿಯನ್ನು 10 ವರ್ಷ ಸಡಿಲಗೊಳಿಸಲು ಅವಕಾಶ ಮಾಡಿಕೊಡಲಾಗಿದೆ.

27. ಕರ್ನಾಟಕ ಹೈನುಗಾರಿಕೆ ಅಭಿವೃದ್ಧಿ ನಿಗಮವು, ರಾಜ್ಯದಲ್ಲಿ ಹೈನುಗಾರಿಕೆಯನ್ನು ಉತ್ತಮಪಡಿಸುವ ಸಲುವಾಗಿ ವಿಶ್ವ ಬ್ಯಾಂಕಿನಿಂದ ಸಹಾಯ ಪಡೆದಿರುವ ಯೋಜನೆಯ ಕಾರ್ಯಾಚರಣೆಯನ್ನು ಮುಂದುವರೆಸಿದೆ, ರಾಜ್ಯದ ಇತರ ಭಾಗಗಳಲ್ಲೂ ಹೈನುಗಾರಿಕೆಯನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ನಮ್ಮ ಸರ್ಕಾರ ಭಾರತ ಹೈನುಗಾರಿಕೆ ನಿಗಮದ ನೆರವಿನೊಂದಿಗೆ ಹೈನುಗಾರಿಕೆ—IIನ್ನು ಕಾರ್ಯಾಚರಣೆಗೆ ತರಲು ನಿರ್ಧರಿಸಿದೆ.

28. 1980–81ರಲ್ಲಿ 1,60,000 ಟನ್ನುಗಳಷ್ಟು ಮೀನಿನ ಉತ್ಪಾದನೆ ಮಾಡಿ ಕರ್ನಾಟಕ ರಾಜ್ಯವು ಕಡಲು ಮೀನುಗಾರಿಕೆಯಲ್ಲಿ ಮುಂದುವರಿದಿರುವ ರಾಜ್ಯಗಳ ಪೈಕಿ ಒಂದೆನಿಸಿದೆ. ಪ್ರಸಕ್ತ ವರ್ಷದಲ್ಲಿ, ಮೀನನ್ನು ರಫ್ತು ಮಾಡುವ ಮೂಲಕ 15 ಕೋಟಿ ರೂಪಾಯಿ ವಿದೇಶಿ ವಿನಿಮಯವನ್ನು ಗಳಿಸಲಾಗಿದೆ. ಮಲ್ಪೆಯಲ್ಲಿ ನಿರ್ಮಿತವಾಗುತ್ತಿರುವ ಸರ್ವಋತು ಮೀನುಗಾರಿಕೆ ಬಂದರಿನ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಮುಂದಿನ ವರ್ಷ ತದಡಿಯಲ್ಲಿ ಇಂಡೋ–ಡೇನಿಷ್ ಮೀನುಗಾರಿಕೆ ಯೋಜನೆಯ ಕಾರ್ಯವನ್ನು ಪ್ರಾರಂಭಿಸಲಾಗುವುದು. ಈಗ ಪ್ರತಿವರ್ಷ ಸುಮಾರು 45,000 ಟನ್ನು ಉತ್ಪಾದನೆಯಿರುವ ಒಳನಾಡು ಮೀನು ಉತ್ಪಾದನೆಯ ಬಗ್ಗೆ ವಿಶೇಷ ಮಹತ್ವ ನೀಡಲಾಗುವುದು.

29. ಭೂ ಸುಧಾರಣಾ ಕಾರ್ಯಕ್ರಮಗಳನ್ನು ಫಲಪ್ರದವಾಗಿ ಕಾರ್ಯಗತಗೊಳಿಸಲಾಗಿದೆ. ಅನುಭೋಗದ ಹಕ್ಕುಗಳನ್ನು ಸ್ಥಿರೀಕರಿಸುವ ಸಲುವಾಗಿ ಹಿಂದಿನ ಗೇಣಿದಾರರಿಂದ 8 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಬಂದಿವೆ. 1979ರ ಡಿಸೆಂಬರ್ ಅಂತ್ಯದವರೆಗೆ 5.33 ಲಕ್ಷ ಅರ್ಜಿಗಳನ್ನು ವಿಲೆ ಮಾಡಲಾಗಿದ್ದು, 31–12–1981ರ ವೇಳೆಗೆ 8.08 ಲಕ್ಷ ಅರ್ಜಿಗಳನ್ನು ವಿಲೆ ಮಾಡಲಾಗಿದೆ. ಹೀಗೆ ವಿಲೆ ಮಾಡಲಾದ ಅರ್ಜಿಗಳ ಪೈಕಿ, 1979ರ ಡಿಸೆಂಬರ್ 3 2 ಲಕ್ಷ ಅರ್ಜಿಗಳು ಮತ್ತು 31–12–1981ರ ಹೊತ್ತಿಗೆ 4.84 ಲಕ್ಷ ಅರ್ಜಿಗಳು ಗೇಣಿದಾರರ ಪರವಾಗಿ ವಿಲೆಯಾಗಿವೆ. ಅದೇ ರೀತಿ, 1979ರ ಡಿಸೆಂಬರ್ ಕೊನೆಯವರೆಗೆ ಅಧಿಕ ಭೂಮಿಗಳ ನಿರ್ಧರಣೆಗಾಗಿ ಸಲ್ಲಿಸಿದ್ದ 84,045 ಘೋಷಣೆಗಳನ್ನು ವಿಲೆ ಮಾಡಲಾಗಿದ್ದು 31–12–1981ರ ವರೆಗೆ 1,35,108 ಘೋಷಣೆಗಳನ್ನು ವಿಲೆ ಮಾಡಲಾಗಿತ್ತು. ಇನ್ನು 12,083 ಘೋಷಣೆಗಳನ್ನು ಮಾತ್ರ ವಿಲೆ ಮಾಡಬೇಕಾಗಿದ್ದು ಅವುಗಳನ್ನು ಶೀಘ್ರವಾಗಿ ವಿಲೆ ಮಾಡಲಾಗುವುದು. 1979ರ ಡಿಸೆಂಬರ್ ಕೊನೆಯವರೆಗೆ 57,000 ಅನುಭೋಗದ ಪ್ರಮಾಣ ಪತ್ರಗಳನ್ನೂ 31–12–1981ರ ವರೆಗೆ 3,80.381 ಪ್ರಮಾಣ ಪತ್ರಗಳನ್ನು ನೀಡಲಾಗಿತ್ತು. ಈಗಿರುವ ನ್ಯಾಯಾಧಿಕರಣಗಳನ್ನು ನಿರಂತರವಾಗಿ ಕಾರ್ಯಾಚರಣೆ ಮಾಡುವಂತೆ ಕೇಳಿಕೊಂಡು ಇನ್ನೂ 100 ನ್ಯಾಯಾಧಿಕರಣಗಳನ್ನು ಮಂಜೂರು ಮಾಡಿದ್ದರಿಂದ ಈ ಎಲ್ಲ ಕಾರ್ಯಗಳನ್ನು ಸಾಧಿಸಲು ಸಾಧ್ಯವಾಯಿತು.

29.1. 31–12–1981ರ ವರೆಗೆ ಅಧಿಕ ಭೂಮಿ ಎಂದು ನಿರ್ಧರಿಸಲಾದ ಭೂಮಿಯ ಒಟ್ಟು ವಿಸ್ತೀರ್ಣ 2,69.205 ಎಕರೆಗಳು. ಇಂಥ ಭೂಮಿಯನ್ನು ಹಂಚುವಾಗ, ಹಂಚಿದ ಭೂಮಿಯಲ್ಲಿ ಸಮಾಜದ ದುರ್ಬಲವರ್ಗದವರಿಗೆ ಯಥೋಚಿತ ಪಾಲು ದೊರೆಯುವಂತೆ ನೋಡಿಕೊಳ್ಳಲು ಎಚ್ಚರಿಕೆ ವಹಿಸಲಾಗಿದೆ. ಇದುವರೆಗೆ ಈ ಭೂಮಿಯ ಶೇಕಡ 55ರಷ್ಟನ್ನು ಹರಿಜನ ಮತ್ತು ಗಿರಿಜನರಿಗೆ ನೀಡಲಾಗಿದೆ.

30. ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಭದ್ರ ಬುನಾದಿ ಒದಗಿಸಲಾಗಿದೆ. ಪಡಿತರ ಚೀಟಿಗಳನ್ನು ಗ್ರಾಹಕರ ಮನೆ ಬಾಗಿಲಲ್ಲೇ ಹಂಚಲಾಗಿದೆ. ಈವರೆಗೆ 41.7 ಲಕ್ಷ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ಒಜಾಸಲಾಗಿದ್ದು, ಪಡಿತರ ಚೀಟಿಗಳನ್ನು ನೀಡುವ ಕಾರ್ಯಕ್ರಮ ಇನ್ನೂ ನಡೆಯುತ್ತಿದೆ. ದೂರದ ಗ್ರಾಮೀಣ ಪ್ರದೇಶಗಳಿಗೂ ಅತ್ಯಾವಶ್ಯಕ ಆಹಾರ ಪದಾರ್ಥಗಳನ್ನು ಒದಗಿಸುವ ದೃಷ್ಟಿಯಿಂದ ಸಹಕಾರ ಸಂಸ್ಥೆಗಳಿಗೆ ಸೂಕ್ತ ಪ್ರೋತ್ಸಾಹಗಳನ್ನು ನೀಡುವ ಮೂಲಕ ವಿತರಣಾ ಕಾರ್ಯವನ್ನು ಕೈ

ಗೊಳ್ಳುವಂತೆ ಉತ್ತೇಜಿಸಲಾಗಿದೆ. ಅಕ್ರಮ ದಾಸ್ತಾನುದಾರರ ಮತ್ತು ಕಾಳಸಂತೆಕೋರರ ವಿರುದ್ಧ ಉಗ್ರ ಕ್ರಮ ಕೈಗೊಳ್ಳಲಾಗಿದೆ. ರಾಜ್ಯದಾದ್ಯಂತ ಏಕಕಾಲದಲ್ಲಿ ಧಾಳಿ ನಡೆಸಿ ಕೋಟ್ಯಾಂತರ ರೂಪಾಯಿ ಮೌಲ್ಯದ ಸರಕುಗಳನ್ನು ವಶಪಡಿಸಿಕೊಳ್ಳಲಾಗಿದೆ.

31. ಹೊಸ ಉದ್ಯಮಗಳಿಗೆ ಪ್ರೋತ್ಸಾಹ ನೀಡುವ ಸರ್ಕಾರದ ಪ್ರಗತಿಪರ ಕಾರ್ಯ ನೀತಿಯನ್ನು ಮುಂದುವರಿಸಲಾಗುತ್ತಿದೆ. ಭಾರಿ, ಮಧ್ಯಮ ಮತ್ತು ಸಣ್ಣ ಪ್ರಮಾಣದ ಉದ್ಯಮಗಳನ್ನು ಅಭಿವೃದ್ಧಿಗೊಳಿಸುವುದರ ಜೊತೆಗೆ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಔದ್ಯಮಿಕ ಸಂಸ್ಥೆಗಳ ಕಾರ್ಯ ಸಾಮರ್ಥ್ಯವನ್ನು ಉತ್ತಮ ಪಡಿಸುವ ಪ್ರಯತ್ನಗಳನ್ನೂ ಕೈಗೊಳ್ಳಲಾಗಿದೆ. ಪ್ರಸಕ್ತ ವರ್ಷ ಭಾರಿ ಉದ್ಯಮಗಳನ್ನು ಪ್ರಾರಂಭಿಸುವುದಾಗಿ ಕೋರಿ ರಾಜ್ಯ ಸರ್ಕಾರಕ್ಕೆ 33 ಹೊಸ ಆಶಯ ಪತ್ರಗಳು ಬಂದಿವೆ.

31.1 ವೃತ್ತಪತ್ರಿಕಾ ಮುದ್ರಣ ಕಾಗದದ ಉತ್ಪಾದನೆ ಮತ್ತು ಉತ್ಪಾದನೆಯ ವಿಸ್ತರಣೆಗಾಗಿ ಬೃಹತ್ ಯೋಜನೆಯನ್ನು ಕೈಗೊಂಡಿರುವ ಮೈಸೂರು ಕಾಗದ ಕಾರ್ಖಾನೆಯು ಪರೀಕ್ಷಾರ್ಥ ಉತ್ಪಾದನೆಯನ್ನು ಪ್ರಾರಂಭಿಸಿದೆ.

32. 1980–81ನೇ ವರ್ಷದಲ್ಲಿ ರಾಜ್ಯ ಸರ್ಕಾರದ ಅನೇಕ ಪ್ರವರ್ಧನ ವ್ಯಾಪಾರ ಮತ್ತು ಔದ್ಯಮಿಕ ಉದ್ಯಮ ಸಂಸ್ಥೆಗಳು ಲಾಭ ಗಳಿಸಿವೆ. ಈ ಪೈಕಿ, ನ್ಯೂ ಗೌರ್ನಮೆಂಟ್ ಇಲೆಕ್ಟ್ರಿಕ್ ಫ್ಯಾಕ್ಟರಿ, ವಿಶ್ವೇಶ್ವರ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಮೈಸೂರು ಕಾಗದ ಕಾರ್ಖಾನೆ, ಹಟ್ಟಿ ಚಿನ್ನದ ಗಣಿ ಉದ್ಯಮ, ಮೈಸೂರು ಮಿನರಲ್ಸ್, ಕರ್ನಾಟಕ ಸಾಬೂನು ಮತ್ತು ಶುದ್ಧಿಕಾರಕವಸ್ತು ಕಾರ್ಖಾನೆ, ಕರ್ನಾಟಕ ರಾಜ್ಯ ಸಣ್ಣ ಉದ್ಯಮಗಳ ಅಭಿವೃದ್ಧಿ ನಿಗಮ ಮತ್ತು ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್—ಇವುಗಳು ಪ್ರಮುಖವಾದ ಸಂಸ್ಥೆಗಳಾಗಿವೆ.

33. ಸಣ್ಣ ಪ್ರಮಾಣದ ಉದ್ಯಮಗಳು, ಕೈಮಗ್ಗ ಉದ್ಯಮಗಳು, ಕರಕುಶಲ ಉದ್ಯಮಗಳು ಮತ್ತು ಚರ್ಮ ಕೈಗಾರಿಕೆಗಳಿಗೆ ಎಂದಿನಂತೆ ಗಮನ ನೀಡಲಾಗುತ್ತಿದೆ. ಈ ವರ್ಷ ಚಿತ್ರದುರ್ಗ, ಬಳ್ಳಾರಿ ಮತ್ತು ಕೊಡಗು ಜಿಲ್ಲೆಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಮಂಜೂರು ಮಾಡಲಾಯಿತು. ಹೀಗಾಗಿ ರಾಜ್ಯದ 19 ಜಿಲ್ಲೆಗಳ ಪೈಕಿ 16 ಜಿಲ್ಲೆಗಳಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸಣ್ಣ ಪ್ರಮಾಣದ ಉದ್ಯಮಗಳಿಗೆ ಮತ್ತು ಕುಶಲ ಕರ್ಮಿಗಳಿಗೆ ಸಹಾಯ ನೀಡುವುದಕ್ಕಾಗಿ ಕೈಗಾರಿಕಾ ಶೆಡ್ಡುಗಳು, ಸಾಮಾನ್ಯ ಸೌಕರ್ಯ ಕೇಂದ್ರಗಳು ಮತ್ತು ವಾಸದ ಹಾಗೂ ಕೆಲಸದ ಶೆಡ್‌ಗಳಿಗಾಗಿ ಡಚ್ ಸರ್ಕಾರದ ನೆರವಿನೊಂದಿಗೆ 18 ಕೋಟಿ ರೂಪಾಯಿಗಳ ಯೋಜನೆಯನ್ನು 1980–81ರಲ್ಲಿ ಪ್ರಾರಂಭಿಸಲಾಯಿತು. ಐದು ವರ್ಷಗಳ ಕಾಲಾವಧಿಯಲ್ಲಿ ಈ ಯೋಜನೆಯು ಪೂರ್ಣಗೊಳ್ಳುವಾಗ ಸಣ್ಣ ಪ್ರಮಾಣದ ಉದ್ಯಮ ವಲಯದಲ್ಲಿರುವ ಅನೇಕ ಕುಶಲ ಕರ್ಮಿಗಳಿಗೂ, ಉದ್ಯಮ ಸಾಹಸಿಗಳಿಗೂ ಸಹಾಯವಾಗುವ ನಿರೀಕ್ಷೆಯಿದೆ. 1981–82ನೇ ವರ್ಷದಲ್ಲಿ ಬಹಳಷ್ಟು ಪ್ರದೇಶದಲ್ಲಿ ಸಮೃದ್ಧವಾಗಿ ಕಬ್ಬು ಬೆಳೆದಿರುವುದರಿಂದ ರಾಜ್ಯದ 23 ಸಕ್ಕರೆ ಕಾರ್ಖಾನೆಗಳಲ್ಲಿ ಸಕ್ಕರೆಯ ಉತ್ಪಾದನೆ ಸಾಕಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. 1982–83ನೇ ವರ್ಷದಲ್ಲಿ ಸಹಕಾರಿ ವಲಯದ ಎರಡು ಸಕ್ಕರೆ ಕಾರ್ಖಾನೆಗಳಲ್ಲಿ ಸಕ್ಕರೆ ಉತ್ಪಾದನೆ ಪ್ರಾರಂಭವಾಗುವ ನಿರೀಕ್ಷೆಯಿದೆ. ನಿರ್ಮಾಣ ಹಂತದಲ್ಲಿರುವ ಮೂರು ಹತ್ತಿ ನೂಲಿನ ಹೊಸ ಗಿರಣಿಗಳ ಕಾಮಗಾರಿ ಮತ್ತು ಈಗಿರುವ ಮೂರು ಇತರ ನೂಲಿನ ಗಿರಣಿಗಳ ವಿಸ್ತರಣಾ ಕಾಮಗಾರಿಗಳು ಪ್ರಗತಿ ಹೊಂದುತ್ತಿವೆ ಮತ್ತು ಆ ಗಿರಣಿಗಳು ಉತ್ಪಾದನಾ ಕಾರ್ಯವನ್ನು ಪ್ರಾರಂಭಿಸಲಿವೆ.

34. 1981–82ನೇ ವರ್ಷವು ರಾಜ್ಯದ ರೇಷ್ಮೆ ವ್ಯವಸಾಯವು ಸವಾಲುಗಳನ್ನು ಎದುರಿಸುವ ಹಾಗೂ ಅವಕಾಶಗಳನ್ನು ಪಡೆಯುವ ವರ್ಷ. ಪ್ರತಿಕೂಲ ಋತುಮಾನದ ಪರಿಸ್ಥಿತಿ ಮತ್ತು ಊಜಿ ನೊಣಗಳ ಹಾವಳಿ ಇವುಗಳಿಂದಾಗಿ ರೇಷ್ಮೆಯ ಉತ್ಪಾದನೆ ಕುಂಠಿತವಾಯಿತು. ಇದಲ್ಲದೆ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ರೇಷ್ಮೆಗೆ ಬೇಡಿಕೆ ಹೆಚ್ಚಿತು. ಇವುಗಳ ಪರಿಣಾಮವಾಗಿ ರೇಷ್ಮೆ ಬೆಲೆಯಲ್ಲಿ ತೀವ್ರ ಹೆಚ್ಚಳ ಉಂಟಾಯಿತು. ಇದರಿಂದಾಗಿ ನೇಕಾರರಿಗೆ ಕೆಲವು ತೊಂದರೆಗಳುಂಟಾದವು. ರೇಷ್ಮೆ ಗೂಡುಗಳಿಗೂ ರೇಷ್ಮೆ ನೂಲಿಗೂ ಒಳ್ಳೆ ಬೆಲೆ ಬಂದುದರಿಂದ ಹಿಪ್ಪುನೇರಳೆ ಕೃಷಿ ಮತ್ತು ರೇಷ್ಮೆ ವ್ಯವಸಾಯದಲ್ಲಿ ಸಾಕಷ್ಟು ಹೆಚ್ಚಳ ಉಂಟಾಯಿತು.

35. ಮುಂಬಯಿಯಲ್ಲಿರುವ ಕೇಂದ್ರ ರೇಷ್ಮೆ ಮಂಡಲಿಯ ಕಛೇರಿಯನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂದು ಕಳೆದ ಹಲವಾರು ವರ್ಷಗಳಿಂದ ರಾಜ್ಯ ಸರ್ಕಾರವು ಕೇಳಿಕೊಳ್ಳುತ್ತಿತ್ತು. ಈ ಪ್ರಯತ್ನಗಳ ಫಲವಾಗಿ ಸದರಿ ಕಛೇರಿಯನ್ನು ಇತ್ತೀಚೆಗೆ ಬೆಂಗಳೂರಿಗೆ ಸ್ಥಳಾಂತರಿಸಲಾಗಿದೆ. ಇದರಿಂದಾಗಿ ರಾಜ್ಯದ ರೇಷ್ಮೆ ವ್ಯವಸಾಯವು ಇನ್ನಷ್ಟು ಅಭಿವೃದ್ಧಿ ಹೊಂದುವ ನಿರೀಕ್ಷೆಯಿದೆ.

36. 1981-82ರಲ್ಲಿ ಕುಟುಂಬ ಕಲ್ಯಾಣ ಯೋಜನಾ ಕಾರ್ಯಕ್ರಮಗಳನ್ನು ಪುನಃ ಶೀಘ್ರವಾಗಿ ಕಾರ್ಯಗತಗೊಳಿಸಲಾಗುತ್ತಿದೆ. ಚಿಕ್ಕ ಸಂಸಾರದ ಆದರ್ಶವನ್ನು ಕ್ರಮೇಣ ಜನಪ್ರಿಯಗೊಳಿಸುವ ದೃಷ್ಟಿಯಿಂದ ತಾಯಿ ಮತ್ತು ಮಕ್ಕಳ ಆರೋಗ್ಯ ರಕ್ಷಣೆ ಮತ್ತು ಸೋಂಕು ನಿವಾರಣಾ ಕಾರ್ಯಕ್ರಮಗಳನ್ನು ತ್ವರಿತಗೊಳಿಸಲಾಗಿದೆ. ಈ ವರ್ಷ ವಿಕ್ಟೋರಿಯಾ ಮತ್ತು ವಾಣೀ ವಿಲಾಸ ಆಸ್ಪತ್ರೆಗಳಲ್ಲಿ ಸಮಗ್ರ ಮತ್ತು ಸುಸಂಘಟಿತ ಅಭಿವೃದ್ಧಿಯ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ವಿಕ್ಟೋರಿಯಾ ಆಸ್ಪತ್ರೆಯ ಕೃತಕ ಅವಯವ ಅಳವಡಿಕೆ ಕೇಂದ್ರದ ಕಾರ್ಯ ಆರಂಭವಾಗಿದೆ. ಸ್ಥಳೀಯ ಮಂಡಳಿಗಳು ನಡೆಸುತ್ತಿದ್ದ 200 ವೈದ್ಯಕೀಯ ಸಂಸ್ಥೆಗಳನ್ನು ಈ ಮೊದಲೇ ವಹಿಸಿಕೊಂಡಿರುವುದಲ್ಲದೆ 1981ರ ಜುಲೈ ತಿಂಗಳಿನಿಂದ 405 ವೈದ್ಯಕೀಯ ಸಂಸ್ಥೆಗಳನ್ನು ಸಹ ವಹಿಸಿಕೊಳ್ಳಲಾಯಿತು.

37. ಕೇಂದ್ರ ಸರ್ಕಾರವು ಯೋಜನಾ ಕಾರ್ಯಕ್ರಮಗಳ ಮೂಲಕ ಕುಷ್ಟರೋಗಿಗಳ ಪುನರ್ವಸತಿ ಮತ್ತು ಪರಿಹಾರ ಹಾಗೂ ಅಂಧತ್ವ ನಿವಾರಣಾ ಕಾರ್ಯಕ್ರಮಕ್ಕೂ ಸಂಬಂಧಪಟ್ಟ ಕಾರ್ಯಯೋಜನೆಗಳಿಗೆ ನೂರಕ್ಕೆ ನೂರರಷ್ಟು ಸಹಾಯ ಧನದ ಆಶ್ವಾಸನೆಯನ್ನು ನೀಡಿದೆ. ಬೆಂಗಳೂರಿನಲ್ಲಿರುವ ರಾಜ್ಯ ಕುಷ್ಟರೋಗ ಆಸ್ಪತ್ರೆಯನ್ನು ಪ್ರಾದೇಶಿಕ ಕುಷ್ಟರೋಗ ಚಿಕಿತ್ಸಾ ತರಬೇತಿ ಹಾಗೂ ಸಂಶೋಧನಾ ಕೇಂದ್ರವಾಗಿ ಪರಿವರ್ತಿಸಲಾಗುತ್ತಿದೆ ಮತ್ತು ಬೆಳಗಾವಿ ಜಿಲ್ಲೆಯ ಖಾನ್‌ಗಾವಿಯಲ್ಲಿ ಕುಷ್ಟರೋಗಿ ಪುನರ್ವಸತಿ ಹಾಗೂ ಕ್ಷೇಮಾಭಿವೃದ್ಧಿ ಘಟಕವೊಂದನ್ನು ಸ್ಥಾಪಿಸಲಾಗುವುದು. ಬೆಂಗಳೂರಿನ ಮಿಂಟೋ ನೇತ್ರ ಚಿಕಿತ್ಸಾ ಸಂಸ್ಥೆಗೆ ಇನ್ನೂ ಹೆಚ್ಚಿನ ಪರಿಕರಗಳನ್ನು ಒದಗಿಸಿ ಅದನ್ನು ಪ್ರಾದೇಶಿಕ ಸಂಸ್ಥೆಯ ಮಟ್ಟದ ದರ್ಜೆಗೆ ಏರಿಸಲಾಗುವುದು.

38. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಾಹನ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಉಂಟಾಯಿತು. 1981-82ರ ಪ್ರಾರಂಭದಲ್ಲಿದ್ದ 3,855 ವಾಹನ ಸಂಚಾರಗಳ ಸಂಖ್ಯೆಯು 1981 ಡಿಸೆಂಬರ್ ಕೊನೆಗೆ 4319ಕ್ಕೆ ಏರಿತು. ಪ್ರಯಾಣಿಕರ ಸಂಖ್ಯೆಯು ದಿನವೊಂದಕ್ಕೆ 24 ಲಕ್ಷದಿಂದ 28 ಲಕ್ಷಕ್ಕೆ ಏರಿತು. ಬೆಂಗಳೂರು ನಗರ ಸಾರಿಗೆ ಸಂಸ್ಥೆ ಸಹ ತನ್ನ ವಾಹನಗಳ ಸಂಖ್ಯೆಯನ್ನು ಹೆಚ್ಚಿಸಿತು. ಆ ಪರಿಣಾಮವಾಗಿ ವಾಹನ ಸಂಚಾರಗಳ ಸಂಖ್ಯೆ 655 ರಿಂದ 759ಕ್ಕೆ ಏರಿತು ಮತ್ತು ಪ್ರಯಾಣಿಕರ ಸಂಖ್ಯೆಯು ದಿನವೊಂದಕ್ಕೆ 8 ಲಕ್ಷದಿಂದ 9.5 ಲಕ್ಷಕ್ಕೆ ಏರಿತು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಾಹನಗಳ ಸಂಖ್ಯೆಯಲ್ಲಿ ಉಂಟಾದ ಈ ಹೆಚ್ಚಳಕ್ಕೆ ರಾಜ್ಯ ಸರ್ಕಾರದವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಸಾಕಷ್ಟು ಪ್ರಮಾಣದ ಪಾಲು ಬಂಡವಾಳವನ್ನು ಹೂಡಿರುವುದೇ ಕಾರಣ. 1980-81ರಲ್ಲಿ ಹೂಡಿದ 4 5 ಕೋಟಿ ರೂಪಾಯಿಗಳ ಮೊತ್ತವನ್ನು 1981-82ರಲ್ಲಿ 4.84 ಕೋಟಿ ರೂಪಾಯಿಗೆ ಏರಿಸಲಾಗಿದೆ. ಅಲ್ಲದೆ 1980-81ರಲ್ಲಿ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 3.35 ಕೋಟಿ ರೂಪಾಯಿಗಳ ಮುಂಗಡವನ್ನು ನೀಡಿತು. ಇದಕ್ಕೆ ಪೂರಕವಾಗಿ ಜೀವವಿಮಾ ನಿಗಮ ಹಾಗೂ ಬ್ಯಾಂಕುಗಳಿಂದ ಸಾಲ ಪಡೆದುಕೊಳ್ಳಲಾಯಿತು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ಸುಧಾರಿಸುವ ಸಲುವಾಗಿ ವಿವಿಧ ಕ್ರಮಗಳನ್ನು ಕೈಗೊಂಡಿತು. ಆ ಮೇರೆಗೆ, ಕಾರ್ಯನಿರ್ವಹಣೆ ಮಾಡುತ್ತಿದ್ದ 12 ವಿಭಾಗಗಳನ್ನು ಪ್ರಾದೇಶಿಕ ನಿರ್ವಾಹಕರ ಅಧಿಕಾರಕ್ಕೊಳಪಟ್ಟ 5 ಪ್ರಾದೇಶಿಕ ವಿಭಾಗಗಳನ್ನಾಗಿ ಪುಂಗಡಿಸಿ ಪ್ರಾದೇಶಿಕ ಕಾರ್ಯನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಆರ್ಥಿಕ ಹಾಗೂ ಆಡಳಿತ ಕ್ಷೇತ್ರಗಳಲ್ಲಿ ಅಧಿಕಾರ ಹಾಗೂ ಕರ್ತವ್ಯಗಳ ವ್ಯಾಪಕ ವಿಕೇಂದ್ರೀಕರಣ ಕ್ರಮವನ್ನೂ ಜಾರಿಗೆ ತರಲಾಗಿದೆ. ತತ್ಪರಿಣಾಮವಾಗಿ ವಾಹನ ಸಂಚಾರಗಳ ರದ್ದಿಯಾತಿ, ವಾಹನಗಳು ಮಧ್ಯೆ ಕೆಟ್ಟು ನಿಲ್ಲುವುದು—ಇವುಗಳ ಸಂಖ್ಯೆ ಕಡಿಮೆಯಾಯಿತು ಮತ್ತು ವಾಹನಗಳ ಉಪಯೋಗ ಹಾಗೂ ಟೈರುಗಳ ಕಾರ್ಯನಿರ್ವಹಣೆಯಲ್ಲಿ ಸುಧಾರಣೆ ಉಂಟಾಯಿತು. ಆಕಸ್ಮಿಕಗಳ ಸಂಖ್ಯೆ ಕಡಿಮೆ ಮಾಡಲು ಸುರಕ್ಷಾ ಕ್ರಮಗಳನ್ನು ಕೈಗೊಳ್ಳಲಾಯಿತು. ಈ ವರ್ಷ ಎಂಟು ಹೊಸ ಬಸ್ ನಿಲ್ದಾಣಗಳನ್ನು ನಿರ್ಮಿಸಿ ಸೌಕರ್ಯಗಳನ್ನು ಒದಗಿಸಲಾಯಿತು.

39. ಪ್ರಾಥಮಿಕ ಪೂರ್ವ ಶಿಕ್ಷಣ ವ್ಯವಸ್ಥೆಯನ್ನು ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಯಿತು. ಅದರಂತೆ, ಈ ವರ್ಷ 100 ಹೊಸ ಪ್ರಾಥಮಿಕ ಪೂರ್ವ ಶಾಲೆಗಳನ್ನು ಪ್ರಾರಂಭಿಸಲಾಯಿತು. (300ಕ್ಕಿಂತ ಹೆಚ್ಚು ಜನ ಸಂಖ್ಯೆಯಿರುವ) ಶಾಲೆಗಳೇ ಇಲ್ಲದ ಎಲ್ಲ ಗ್ರಾಮಗಳಿಗೂ ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡಲಾಯಿತು. ತರಗತಿ ಕೊಠಡಿಗಳ ನಿರ್ಮಾಣದ ಬೃಹತ್ ಕಾರ್ಯಕ್ರಮವನ್ನು ಸಹ ಕೈಗೊಳ್ಳಲಾಯಿತು. ಸುಮಾರು 2,000 ತರಗತಿ ಕೊಠಡಿಗಳನ್ನು 2 ಕೋಟಿ ರೂಪಾಯಿಗಳಿಗೂ ಮೀರಿದ ವೆಚ್ಚದಲ್ಲಿ ನಿರ್ಮಿಸಲಾಗುವುದು. ಈ ಕಾರ್ಯಕ್ರಮ ಪೂರ್ಣಗೊಂಡಾಗ ಎಲ್ಲ ಗ್ರಾಮಗಳಿಗೂ ಕನಿಷ್ಟ ಒಂದು ತರಗತಿ ಕೊಠಡಿಯ ಪ್ರಾಥಮಿಕ ಶಾಲೆಯನ್ನು ಒದಗಿಸಿದಂತಾಗುತ್ತದೆ.

39.1. ಉಪಾಧ್ಯಾಯರಿಗೆ ನೈತಿಕ ಶಿಕ್ಷಣದಲ್ಲಿ ತರಬೇತಿ ನೀಡುವ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ನಮ್ಮ ಶಿಕ್ಷಣ ಪದ್ಧತಿಗೆ ಗುಣಮೌಲ್ಯ ಒದಗಿಸುವಲ್ಲಿ ಇದು ಪ್ರಥಮ ಹೆಜ್ಜೆ. ಶಾಲೆಗಳಲ್ಲಿರುವ ಶಾರೀರಿಕ ಶಿಕ್ಷಣ ಭೋಧಕರಿಗೆ ಯೋಗ ಶಿಕ್ಷಣದಲ್ಲಿ ತರಬೇತಿ ನೀಡುವ ಸಲುವಾಗಿ ಸರ್ಕಾರದವರು ಮಲ್ಲಾಡಿಹಳ್ಳಿಯಲ್ಲಿರುವ ಯೋಗ ಶಿಕ್ಷಣ ಕೇಂದ್ರವನ್ನು ಅಂಥ ಒಂದು ಸಂಸ್ಥೆಯನ್ನಾಗಿ ಅಂಗೀಕರಿಸಿದ್ದಾರೆ.

39.2. ವಿಶೇಷವಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಸೆಕೆಂಡರಿ ಹಾಗೂ ಪ್ರಿ-ಯೂನಿವರ್ಸಿಟಿ ಮಟ್ಟದಲ್ಲಿ ಶಿಕ್ಷಣ ಸೌಲಭ್ಯಗಳನ್ನು ಒದಗಿಸಿಕೊಡುವ ದೃಷ್ಟಿಯಿಂದ 209 ಪ್ರೌಢಶಾಲೆಗಳು ಮತ್ತು 86 ಕಿರಿಯ ಕಾಲೇಜುಗಳನ್ನು ಈ ವರ್ಷ ಮಂಜೂರು ಮಾಡಲಾಗಿದೆ. ಈಗಿರುವ 13 ವಿದ್ಯಾಪೀಠಗಳ ಜೊತೆಗೆ ನಾಲ್ಕು ಹೊಸ ವಿದ್ಯಾಪೀಠಗಳನ್ನು ಸ್ಥಾಪಿಸಿ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಇನ್ನಷ್ಟು ಪ್ರೋತ್ಸಾಹ ನೀಡಲಾಗಿದೆ. ಈ ವಿದ್ಯಾಪೀಠಗಳ ಪೈಕಿ ಎರಡು ವಿದ್ಯಾಪೀಠಗಳು ಮಹಿಳೆಯರಿಗಾಗಿಯೇ ಇರುವುದು ಮಹತ್ವ ಪೂರ್ಣ ವಿಷಯವಾಗಿದೆ.

40. ಶಾಲಾ ಶಿಕ್ಷಣದಲ್ಲಿ ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿ ಅಳವಡಿಸಿಕೊಳ್ಳುವುದನ್ನು ಕುರಿತ ಗೋಕಾಕ್ ಸಮಿತಿಯ ಶಿಫಾರಸನ್ನು ಅಂಗೀಕರಿಸಲಾಗಿದೆ. ಈ ವರ್ಷದ ನವೆಂಬರ ತಿಂಗಳಲ್ಲಿ ನಡೆಸಬೇಕೆಂದು ಉದ್ದೇಶಿಸಿರುವ ವಿಶ್ವ ಕನ್ನಡ ಸಮ್ಮೇಳನದ ಸಿದ್ಧತೆಗಳು ನಡೆಯುತ್ತಿವೆ.

41. ಸಂಕಷ್ಟ ಸ್ಥಿತಿಯಲ್ಲಿರುವ ಕಲಾವಿದರಿಗೂ ಹಾಗೂ ಪ್ರತಿಭಾವಂತ ಕಲಾವಿದರಿಗೆ ಪ್ರೋತ್ಸಾಹ ನೀಡುವ ಕಾರ್ಯ ಕ್ರಮವನ್ನು ಇನ್ನಷ್ಟು ವ್ಯಾಪಕ ಗೊಳಿಸಲಾಗಿದೆ. ಈ ವರ್ಷ 682 ರಷ್ಟು ಕಲಾವಿದರಿಗೆ ನಿವೃತ್ತಿ ವೇತನ ಮತ್ತು 80 ಕಲಾವಿದರಿಗೆ ಮಾಸಿಕ ಗೌರವಧನ ನೀಡಲಾಗಿದೆ. ಹಾಗೆಯೇ ಸಂಕಷ್ಟ ಪರಿಸ್ಥಿತಿಯಲ್ಲಿರುವ 39 ಪುರುಷ ಹಾಗೂ ಮಹಿಳಾ ಕ್ರೀಡಾ ಪಟುಗಳಿಗೆ ಆರ್ಥಿಕ ನೆರವು ನೀಡಲಾಗಿದೆ. ಕರ್ನಾಟಕದಲ್ಲಿ ಸಾಹಿತ್ಯ, ಕಲೆ, ಕ್ರೀಡೆ, ಸಾಮಾಜಿಕ ಸೇವೆಗಳು ಮತ್ತು ಪತ್ರಿಕೋದ್ಯಮಗಳಂಥ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಪ್ರತಿಭಾನ್ವಿತ ವ್ಯಕ್ತಿಗಳಿಗೆ ರಾಜ್ಯೋತ್ಸವದ ಸಂದರ್ಭದಲ್ಲಿ ರಾಜ್ಯ ಪ್ರಶಸ್ತಿಗಳನ್ನು ನೀಡುವ ವ್ಯವಸ್ಥೆಯನ್ನು ಏರ್ಪಡಿಸಿ ಅಂಥವರ ಸೇವೆಗಳಿಗೆ ಮನ್ನಣೆ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗಿದೆ.

42. 1980-81 ಮತ್ತು 1981-82ರಲ್ಲಿ ಸರ್ಕಾರವು, ತನ್ನ ನೌಕರರ ಪ್ರಯೋಜನಾರ್ಥವಾಗಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ನೌಕರರ ಬೇಡಿಕೆಗಳನ್ನು ಪರಿಶೀಲಿಸಲು ಮತ್ತು ಆ ಕುರಿತು ಶಿಫಾರಸುಗಳನ್ನು ಮಾಡಲು ಸಚಿವ ಸಂಪುಟದ ಉಪ-ಸಮಿತಿಯೊಂದನ್ನು ರಚಿಸಲಾಗಿದೆ. ಸಚಿವ ಸಂಪುಟದ ಉಪ-ಸಮಿತಿಯ ಶಿಫಾರಸಿನ ಮೇರೆಗೆ, ಸರ್ಕಾರವು 9 ಬೇಡಿಕೆಗಳ ಸಂಬಂಧದಲ್ಲಿ ಈಗಾಗಲೇ ತೀರ್ಮಾನ ಕೈಗೊಂಡಿದೆ ಮತ್ತು ಉಳಿದ ಬೇಡಿಕೆಗಳು ಸರ್ಕಾರದ ಪರ್ಯಾಲೋಚನೆಯಲ್ಲಿವೆ. ಈ ಮಧ್ಯೆ, ಸರ್ಕಾರವು ವೇತನ ಶ್ರೇಣಿ ಪರಿಷ್ಕರಣ ಮತ್ತು ಕಾಲಮಿತಿ ಬಡ್ತಿಯ ಸಂಬಂಧದಲ್ಲಿ ಕರ್ನಾಟಕ ಸರ್ಕಾರೀ ನೌಕರರ ಸಂಘದವರ ಮುಂದೆ ಒಂದು ಅನುಕೂಲಕರವಾದ ಸಮಗ್ರ ಸೂಚನೆಯನ್ನು ಪ್ರಸ್ತಾವಿಸಿತು. ಸರ್ಕಾರವು ಉದಾರವಾಗಿ ಅನುಕೂಲಕರವಾದ ಸಮಗ್ರ ಸೂಚನೆಯನ್ನು ಪ್ರಸ್ತಾವಿಸಿದ್ದರೂ, ಸರ್ಕಾರಿ ನೌಕರರು 1982ರ ಜನವರಿ 7 ರಂದು ಒಂದು ದಿನದ ಮುಷ್ಕರವನ್ನು ಹೂಡಿದುದು ದುರದೃಷ್ಟಕರ ಸಂಗತಿ. ಆದರೂ, ಸರ್ಕಾರವು ರಾಜ್ಯದ ಸಕಲ ಸಂಪನ್ಮೂಲಗಳ ಪರಿಮಿತಿಗೊಳಪಟ್ಟು ಮತ್ತು ರಾಜ್ಯದ ಇತರ ಕಾರ್ಯ ನೀತಿಗಳ ವ್ಯಾಪ್ತಿಗೊಳಪಟ್ಟು ಸರ್ಕಾರಿ ನೌಕರರ ಬೇಡಿಕೆಗಳನ್ನು ಕುರಿತು

ತೀರ್ಮಾನ ಕೈಗೊಳ್ಳುವ ಬಗ್ಗೆ ತನ್ನ ಆಶಯವನ್ನು ವ್ಯಕ್ತಪಡಿಸಿದೆ. ಹಾಗೆಯೇ ಸರ್ಕಾರಿ ನೌಕರರು ಶಿಸ್ತು, ಸಂಯಮ ಹಾಗೂ ಆದರ್ಶ ರೀತಿಯಲ್ಲಿ ಜನತೆಯ ಸೇವೆ ಸಲ್ಲಿಸಬೇಕೆಂಬುದು ಸರ್ಕಾರದ ಅಪೇಕ್ಷೆ. ಸರ್ಕಾರಿ ನೌಕರರು ತಮ್ಮ ಬೇಡಿಕೆಗಳನ್ನು ಶಾಂತ ರೀತಿಯಲ್ಲಿ ತೀರ್ಮಾನಿಸಿಕೊಳ್ಳಲು ಪ್ರಯತ್ನಿಸುವರೆಂದು ಸಾರ್ವಜನಿಕರು ನಿರೀಕ್ಷಿಸುವುದು ಸಹಜ.

43. ಹಿಂದಿನ ಅಧಿವೇಶನದಲ್ಲಿ ನಿಮ್ಮ ಮುಂದೆ ಕೆಲವು ವಿಧೇಯಕಗಳನ್ನು ಮಂಡಿಸಲಾಗಿತ್ತು. ಇವುಗಳ ಪೈಕಿ ಕೆಲವು ವಿಧೇಯಕಗಳು ಸದನ ಒಪ್ಪಿಗೆ ಪಡೆದು ಅಧಿನಿಯಮಗಳಾಗಿವೆ. ಕಾಲಾವಕಾಶದ ಅಭಾವದಿಂದ ಉಳಿದ ವಿಧೇಯಕಗಳ ಬಗ್ಗೆ ಕ್ರಮ ಕೈಗೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಅವನ್ನು ನಿಮ್ಮ ಮುಂದೆ ಈಗ ಮಂಡಿಸಲಾಗುವುದು. ವಿಧಾನ ಮಂಡಲದ ಹಿಂದಿನ ಅಧಿವೇಶನದ ತರುವಾಯ ಪ್ರಖ್ಯಾಪಿಸಲಾದ ಅಧ್ಯಾದೇಶಗಳ ಬದಲಾಗಿ ಮಂಡಿಸಬೇಕಾದ ವಿಧೇಯಕಗಳೂ ಸೇರಿ ಕೆಲವು ಹೊಸ ವಿಧೇಯಕಗಳನ್ನು ಪ್ರಸಕ್ತ ಅಧಿವೇಶನದಲ್ಲಿ ನಿಮ್ಮ ಮುಂದೆ ಮಂಡಿಸಲಾಗುವುದು.

44. ನಿಮ್ಮ ಸಕಲ ಪ್ರಯತ್ನಗಳಲ್ಲಿ ನಿಮಗೆ ಯಶಸ್ಸು ಲಭಿಸಲಿ ಎಂದು ಹಾರೈಸುತ್ತೇನೆ.

''ಜೈ-ಹಿಂದ್''

Obituary Reference

MR. SPEAKER.—I regret to make a reference to the demise of Sri K. Venkataramaiah a sitting member of this House and Sri D. Rajagopal member of the Legislative Council and the following former members who have expired after the adjournment of the last Session.—

1. Sri K. Venkataramaiah, expired on 20-1-1982. He was elected to the Sixth Assembly from Hosadurga Constituency. He took part in the Freedom Movement, Quit India Movement, Railway agitation, and was imprisoned several time. He was a member of the M.P.C.C. and awarded Tamra patra. He was an agriculturist by profession and worked for the upliftment of Harijans and Girijans.

2. Sri D. Rajagopal, expired on 2-1-1982. He was elected to the Legislative Council for 3 times i.e., during 1964, 1970 and 1976. He was a labour leader and was associated with many organisations and was a good Parliamentarian.

3. Sri H. R. T. Rajgopal Mudaliar a member of the Mysore Representative Assembly during the period 1945-49, expired on 24-8-1981.

4. Sri K.L. Narasimhaiah, a member of the Legislative Assembly during the period from 1957-62, expired on 6-8-1981.

5. Sri B.D. Naik a member of the Legislative Assembly during the period from 1957-1962, expired on 26-8-1981.

6. Sri P.M. Swami Dorai a member of the Legislative Assembly during the period 1952-57, expired on 30-8-1981.